
# ಜ್ಞಾನಶಕ್ತಿ

ಮಾಸ ಪತ್ರಿಕೆ

JNANASHAKTHI

ಶ್ರೀ ಸುಬ್ರಹ್ಮಣ್ಯ ಸಭಾ (ರಿ.), ಮಂಗಳೂರು - 575 003


ಸಂಪುಟ - 14 Reg. No. : KARBIL / 2005 / 16123 ಜುಲೈ - 2025 ಪುಟ : 8 ದರ ₹ 3-00 ವಾರ್ಷಿಕ ಚಂದಾ ₹ 30-00 ಸಂಚಿಕೆ : 07 ಪ್ರಕಟಣೆ : 26-07-2025


## ನಮ್ಮ ಸಮಾಜದ ಬಹುಮುಖೀ ವ್ಯಕ್ತಿತ್ವದ ಹಿರಿಯ ಸಾಧನೆಯ ಕಿರಿಯ ಸರದಾರ - ಕರುಣಾಕರ ಬೆಳ್ಳೆ



ಮಂಗಳೂರಿನ ಶ್ರೀ ಸುಬ್ರಹ್ಮಣ್ಯ ಸಭೆಯು ಕಳೆದ ಶತಮಾನದುದ್ದಕ್ಕೂ ಸಮಾಜ ಸೇವೆಯನ್ನು ಮಾಡುತ್ತಾ ಬರುತ್ತಿದೆ. ಇತ್ತೀಚೆಗಿನ ಕೆಲ ವರ್ಷಗಳಿಂದ ಶ್ರೀ ಸಭಾದ ಕಾರ್ಯಚಟುವಟಿಕೆಗಳು ಗಮನಾರ್ಹವಾಗಿ ಅಭಿವೃದ್ಧಿ ಪಥದತ್ತ ಸಾಗುತ್ತಿರುವುದು ಪ್ರಶಂಸನೀಯವಾಗಿದೆ. ಅದರಲ್ಲಿ ಪ್ರಮುಖವಾಗಿ ಶ್ರೀ ಸಭೆಯು ನಡೆಸುತ್ತಿರುವ ಹಾಸ್ಟೆಲ್ ಕಟ್ಟಡ ಹಾಗೂ ಸಭಾಂಗಣಗಳು ಜೀರ್ಣೋದ್ಧಾರಗೊಂಡು ಹಳೆಯ ಹಂಚಿನ ಕಟ್ಟಡದಿಂದ ಆಧುನಿಕ ಕಾಂಕ್ರೀಟ್ ಕಟ್ಟಡವು ವಿಶಾಲವಾಗಿ ರೂಪುಗೊಂಡಿದ್ದು ಆಕರ್ಷಣೀಯವಾಗಿದೆ. ವಿದ್ಯಾರ್ಥಿಗಳಿಗೆ ಹಾಗೂ ಉದ್ಯೋಗಿಗಳಿಗೆ ಉಳಿದುಕೊಳ್ಳಲು ಸುಸಜ್ಜಿತವಾಗಿದ್ದು, ಸಮಾಜದ ಜನರಿಗೆ ಅನುಕೂಲಕರವಾಗಿದೆ ಮತ್ತು ಸಭೆ-ಸಮಾರಂಭ ನಡೆಸಲು ಸಭಾಂಗಣ ಕೂಡ ಉಪಯುಕ್ತವಾಗಿದೆ.

ಶ್ರೀ ಸುಬ್ರಹ್ಮಣ್ಯ ಸಭೆಯ ವತಿಯಿಂದ ಶ್ರೀ ಸುಬ್ರಹ್ಮಣ್ಯ ಸಹಕಾರಿ ಸಂಘ – ಸಮಾಜದವರಿಗೆ ಆರ್ಥಿಕ ಸವಲತ್ತು ನೀಡಲು ಬಹಳ ಹಿಂದೆಯೇ ಪ್ರಾರಂಭವಾಗಿ ಸೇವೆ ನೀಡುತ್ತಾ ಬಂದಿರುತ್ತದೆ. ಮೊದಲಿಗೆ ಮಂಗಳೂರಿನ ರಥಬೀದಿಯಲ್ಲಿ ಪ್ರಾರಂಭವಾಗಿ ಹಲವು ವರ್ಷಗಳವರೆಗೆ ಸೇವೆ ನೀಡಿದ ಸಹಕಾರಿ ಸಂಘ ಇತ್ತೀಚಿಗೆ ಕೆಲವು ವರ್ಷಗಳಿಂದ ಒಟ್ಟು 17 ಶಾಖೆಗಳನ್ನು ಹೊಂದಿದ್ದು, ನಿಜಕ್ಕೂ ನಮ್ಮ ಸಮಾಜದವರಿಗೆ ಆರ್ಥಿಕವಾಗಿ ಸದೃಢವಾಗಲು ಸಹಕಾರಿಯಾಗಿ ಸೇವೆ ನೀಡುತ್ತಿರುವುದು ಪ್ರಶಂಸಾರ್ಹ ವಿಷಯವಾಗಿದೆ. ಅಲ್ಲದೆ ದಕ್ಷಿಣ ಕನ್ನಡ ಜಿಲ್ಲೆ ಹಾಗೂ ಉಡುಪಿ ಜಿಲ್ಲೆಯ ಹಲವಾರು ಊರುಗಳಲ್ಲಿ ಶಾಖೆಗಳನ್ನು ಪ್ರಾರಂಭಿಸಿ ಸೇವೆ ನೀಡುತ್ತಿರುವುದು ಸಕಾರಾತ್ಮಕ ಬೆಳವಣಿಗೆಯಾಗಿದ್ದು, ಸಮಾಜದ ಆರ್ಥಿಕ ದುರ್ಬಲರಿಗೆ ತುಂಬಾ ಸಹಕಾರಿಯಾಗಿದೆ.

ಅಲ್ಲದೆ ಇತ್ತೀಚೆಗಿನ ಕೆಲವು ವರ್ಷಗಳ ಹಿಂದೆ ಸಭೆಯ ವತಿಯಿಂದ ಸಮಾಜದ ಹಿರಿಯ ವ್ಯಕ್ತಿಗಳಿಗೆ ಉಳಿದುಕೊಳ್ಳಲು ಪುತ್ತೂರಿನಲ್ಲಿ 'ಶಿವಸದನ' ಎಂಬ ಸುಸಜ್ಜಿತವಾದ ಬಹುಮಹಡಿ ಕಟ್ಟಡದಲ್ಲಿ ಹಿರಿಯ ನಾಗರಿಕರಿಗೆ ಅವರ ಇಳಿವಯಸ್ಸಿನಲ್ಲಿ ನೆಮ್ಮದಿಯ ಜೀವನ ನಡೆಸಲು ಅನುಕೂಲವಾಗುವಂತೆ ಮಾಡಿದ ಸತ್ಕಾರ್ಯ ನಿಜಕ್ಕೂ ಸ್ತುತ್ಯಾರ್ಹ. ನಮ್ಮ ಸಮಾಜದ ಕೆಲವು ಪುರಾತನ ದೇವಸ್ಥಾನಗಳ ಅಭಿವೃದ್ಧಿ ಕಾರ್ಯಗಳನ್ನು ಕೈಗೊಂಡು ಅವುಗಳ ಪುನರುತ್ಥಾನ ಮಾಡಿ, ಧಾರ್ಮಿಕ ಸೇವೆಯನ್ನು ಮಾಡುತ್ತಿರುವುದು ಕೂಡ ಮೆಚ್ಚುಗೆಯ ವಿಷಯವಾಗಿದೆ.

ಈ ಎಲ್ಲಾ ಸತ್ಕಾರ್ಯಗಳ ರೂವಾರಿಯಾದ ಶ್ರೀ ಕರುಣಾಕರ ಬೆಳ್ಳೆಯವರು ಸಭೆಯ ಕಾರ್ಯದರ್ಶಿಯಾಗಿ ಕೆಲವು ವರ್ಷಗಳಿಂದ ತಮ್ಮ ಸೇವೆಯನ್ನು ಅವಿರತವಾಗಿ ಮಾಡುತ್ತಿರುವುದು ನಿಜಕ್ಕೂ ಮೆಚ್ಚುವಂತಹ ವಿಚಾರವಾಗಿದೆ. ಅವರ ನಿರಂತರ ಶ್ರಮ, ಕಾರ್ಯಚಟುವಟಿಕೆಗಳು ಪ್ರಮುಖ ಪಾತ್ರವಹಿಸಿವೆ. ಸಮಾಜದ ಅಭಿವೃದ್ಧಿಗೆ ಉತ್ತಮ ಕಾಣಿಕೆ ನೀಡಿ, ನಿಸ್ವಾರ್ಥ ಸೇವೆ ನೀಡಿ ತಮ್ಮ ಜೀವನವನ್ನು ಸಾರ್ಥಕಗೊಳಿಸಿದ ಶ್ರೀ ಕರುಣಾಕರ ಬೆಳ್ಳೆ ಅವರಿಗೆ ಭಗವಂತನು ಆಯುರಾರೋಗ್ಯಗಳನ್ನು ನೀಡಿ ಮುಂದಕ್ಕೂ ಸಮಾಜಮುಖೀ ಸೇವೆ ನೀಡುವಂತಾಗಲಿ ಎಂದು ಹಾರೈಸುತ್ತೇನೆ.

**ಎನ್. ಪದ್ಮನಾಭ ರಾವ್, ಬೆಂಗಳೂರು**

## ಶ್ರೀ ಸುಬ್ರಹ್ಮಣ್ಯ ಸಭಾ (ರಿ.), ಮಂಗಳೂರು

ಸಮಾಜ ಬಾಂಧವರೇ,



ಶ್ರೀ ಸುಬ್ರಹ್ಮಣ್ಯ ಸಭಾದಲ್ಲಿ ವರ್ಷಂಪ್ರತಿಯಂತೆ
ತಾರೀಕು **17-08-2025**ನೇ ರವಿವಾರದಂದು
**ಶ್ರೀಕೃಷ್ಣ ಜನ್ಮಾಷ್ಟಮಿಯನ್ನು**
ವಿವಿಧ ಕಾರ್ಯಕ್ರಮಗಳೊಂದಿಗೆ ಆಚರಿಸಲಾಗುವುದು.



ಸಮಾಜ ಬಾಂಧವರು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಬೇಕೆಂದು ವಿನಂತಿಸುತ್ತಿದ್ದೇವೆ.

**ಅಧ್ಯಕ್ಷರು ಮತ್ತು ಸರ್ವಸದಸ್ಯರು**

### ಕಾರ್ಯಕ್ರಮಗಳು

ಬೆಳಗ್ಗೆ 7-30ರಿಂದ 8-30 :
ವಿವಿಧ ಶ್ಲೋಕಗಳ ಪಾರಾಯಣ
ಬೆಳಗ್ಗೆ 8-30ರಿಂದ : ಉಪಾಹಾರ
ಬೆಳಗ್ಗೆ 10-00ರಿಂದ : ಭಗವದ್ಗೀತೆ ಪಠಣ ಸ್ಪರ್ಧೆ
10 ವರ್ಷದ ಕೆಳಗಿನ ಮಕ್ಕಳಿಗೆ
ಭಗವದ್ಗೀತೆಯ ಧ್ಯಾನಶ್ಲೋಕ ಸ್ಪರ್ಧೆ
10-18 ವರ್ಷದ ವಿಭಾಗ
ಭಗವದ್ಗೀತೆಯ 15ನೇ ಅಧ್ಯಾಯ
18 ವರ್ಷದ ಮೇಲ್ಪಟ್ಟ ವಿಭಾಗ
ಭಗವದ್ಗೀತೆಯ 15ನೇ ಅಧ್ಯಾಯ
ಬೆಳಗ್ಗೆ 11-00ರಿಂದ : **ಮುದ್ದುಕೃಷ್ಣ ವೇಷ ಸ್ಪರ್ಧೆ**
3 ವರ್ಷದೊಳಗಿನ ವಿಭಾಗ
3ರಿಂದ 8 ವರ್ಷದೊಳಗಿನ ವಿಭಾಗ
8ರಿಂದ 12 ವರ್ಷದೊಳಗಿನ ವಿಭಾಗ

ಬೆಳಗ್ಗೆ 11-30ರಿಂದ : ಭಕ್ತಿಗೀತೆ ಸ್ಪರ್ಧೆ
10ರಿಂದ 18 ವರ್ಷದ ವಿಭಾಗ
19ರಿಂದ 40 ವರ್ಷದ ವಿಭಾಗ
41 ವರ್ಷ ಮೇಲ್ಪಟ್ಟವರ ವಿಭಾಗ
ಚಕ್ಕುಲಿ ಸಂಖ್ಯೆ ಊಹನೆ ಸ್ಪರ್ಧೆ (ಮುಕ್ತ ವಿಭಾಗ)
ಮಧ್ಯಾಹ್ನ 12-15ರಿಂದ : ಮಡಕೆ ಒಡೆಯುವ ಸ್ಪರ್ಧೆ
ಮಧ್ಯಾಹ್ನ 1-00ರಿಂದ : ಭೋಜನ
ಮಧ್ಯಾಹ್ನ 2-00ರಿಂದ : ಶಂಖ ಊದುವ ಸ್ಪರ್ಧೆ
16 ವರ್ಷದ ಒಳಗಿನ ವಿಭಾಗ ❖ 16 ವರ್ಷ ಮೇಲ್ಪಟ್ಟವರ ವಿಭಾಗ
2-30ರಿಂದ : ಶ್ರೀಕೃಷ್ಣನ ಬಗ್ಗೆ ರಸಪ್ರಶ್ನೆ
3-00ರಿಂದ : **ಸಾಂಸ್ಕೃತಿಕ ಕಾರ್ಯಕ್ರಮಗಳು**

**ಬಹುಮಾನದ ಪ್ರಾಯೋಜಕರು**
ಶ್ರೀಮತಿ ಪುಷ್ಪಾವತಿ ಶ್ರೀನಿವಾಸ್

**ಸಾಂಸ್ಕೃತಿಕ ಕಾರ್ಯಕ್ರಮದಲ್ಲಿ ಭಾಗವಹಿಸಲಿಚ್ಛಿಸುವವರು ಸಂಪರ್ಕಿಸಿ :**

ಶ್ರೀ ಜನಕರಾಜ್ - 8494939446 | ಶ್ರೀ ಸಾಯಿಪ್ರಸಾದ್ - 9980050591
ಶ್ರೀಮತಿ ಜಯಂತಿ ವಿನೋದ್ ರಾವ್ - 9945742680 | ಶ್ರೀಮತಿ ಶಕುಂತಲಾ ವಿಜಯಕುಮಾರ್ - 9481973207

## ಶೃಂಗೇರಿ ಯಾತ್ರೆ



ಜಗದ್ಗುರು ಶ್ರೀ ಶ್ರೀ ಭಾರತೀತೀರ್ಥ ಸ್ವಾಮೀಜಿಗಳ ಚಾತುರ್ಮಾಸ ಪ್ರಯುಕ್ತ ಶ್ರೀ ಸುಬ್ರಹ್ಮಣ್ಯ ಸಭಾದ ವತಿಯಿಂದ ಶೃಂಗೇರಿ ಯಾತ್ರೆಯನ್ನು ಆಯೋಜಿಸಲಾಗಿದೆ.

ತಾರೀಕು **24-08-2025**ನೇ ರವಿವಾರ ಬೆಳಗ್ಗೆ ಗಂಟೆ **6-30**ಕ್ಕೆ ಶ್ರೀ ಸಭಾದಿಂದ ಬಸ್ಸಿನಲ್ಲಿ ಹೊರಟು, ಸಂಜೆಯ ವೇಳೆಗೆ ಹಿಂತಿರುಗುವುದು. ಸಮಾಜ ಬಾಂಧವರು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಬೇಕೆಂದು ವಿನಂತಿಸುತ್ತೇವೆ. ವ್ಯವಸ್ಥೆಯ ದೃಷ್ಟಿಯಿಂದ ಸಾಕಷ್ಟು ಮುಂಚಿತವಾಗಿ ತಮ್ಮ ಹೆಸರನ್ನು ನೋಂದಾಯಿಸಲು ಕೋರಲಾಗಿದೆ.

**ಪ್ರವಾಸದ ಶುಲ್ಕ :**
ಒಬ್ಬರಿಗೆ – ರೂ. 600/-
5ರಿಂದ 12 ವರ್ಷದೊಳಗಿನ ಮಕ್ಕಳಿಗೆ – ರೂ. 400/-

**ಹೆಚ್ಚಿನ ವಿವರಗಳಿಗೆ ಸಂಪರ್ಕಿಸಿ :**
ಶ್ರೀ ಪಿ. ಶ್ರೀಕಾಂತ್ ರಾವ್ ✆ : 7795116598
ಶ್ರೀಮತಿ ಸುಮಂಗಲಾ ಪ್ರಭಾಕರ್ ✆ : 9844242442



## ಶ್ರೀ ಸುಬ್ರಹ್ಮಣ್ಯ ಸಭಾ (ರಿ.)

ಕುಡ್ಪಿ ಪದ್ಮನಾಭಯ್ಯ ಗಾರ್ಡನ್ಸ್, ಬಿಜೈ ರಸ್ತೆ, ಮಂಗಳೂರು

ತಾರೀಕು **5-09-2025**ನೇ ಶುಕ್ರವಾರ
ಬೆಳಗ್ಗೆ ಗಂಟೆ 6-00ಕ್ಕೆ
ಶ್ರೀ ಸಭಾದಲ್ಲಿ **ಋಗುಪಾಕರ್ಮ**
ನಡೆಯಲಿದೆ.

ಸಮಾಜ ಬಾಂಧವರು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಬೇಕಾಗಿ ವಿನಂತಿಸುತ್ತೇವೆ.

## ಜ್ಞಾನಶಕ್ತಿ ಮಾಸಪತ್ರಿಕೆ

ಪ್ರಧಾನ ಸಂಪಾದಕರು : ಎಂ. ಎಸ್. ರಘುನಾಥ ರಾವ್ ಪುತ್ತೂರು 9448481696

ಸಂಪಾದಕರು : ಪಿ. ಶ್ರೀಕಾಂತ್ ರಾವ್ 9343361618

ಸಂಪಾದಕ ಮಂಡಳಿ : • ನಾಗರಾಜ್ ವರ್ಕಾಡಿ
• ರಘುವೀರ್ ಪೆರ್ಡೂರು • ಟಿ.ಬಿ. ಮೋಹನ್ ರಾವ್ • ಸ್ವಾತಿ ಪ್ರಮೋದ್ ಕ್ಯಾದಿಗೆ

ಆರ್ಥಿಕ ಸಲಹಾ ಸಮಿತಿ :
• ಉದಯ ಕುಮಾರ್ ಪಿ. • ಸಂತೋಷ್ ಕುಮಾರ್ ಯು.
• ಅನಿಲ್ ರಾವ್ ಬಿ. ಎಸ್.

ಗೌರವ ಸಲಹೆಗಾರರು : • ಚೇತನ್ ಶರ್ಮ • ಶ್ರೀಮತಿ ಅರುಣಾ ಸೋಮಶೇಖರ್

ಪ್ರಕಾಶಕರು : ಡಾ. ಎ. ಪಿ. ಕೃಷ್ಣ

: 7795116598 : 9343361618 e-mail : jnanashakthisss@gmail.com


## ದಿ| ಕೆಡೆಂಜಿ ಭಾಗೀರಥಿ ದಾಮೋದರ ಶಾಸ್ತ್ರಿ ಪ್ರತಿಷ್ಠಾನ, ಕುಳಾಯಿ

**ಕೋಂ. ಕೆ. ಸದಾಶಿವ ಶಾಸ್ತ್ರಿ 3-68(7)**
**ಶ್ರೀ ವಿಷ್ಣುಮೂರ್ತಿ ದೇವಸ್ಥಾನ ರಸ್ತೆ, ಕುಳಾಯಿ – 575 019**

2024-25ರ ಸಾಲಿನ ಶೈಕ್ಷಣಿಕ ವರ್ಷದ ಎಸ್.ಎಸ್.ಎಸ್.ಎಲ್.ಸಿ. ಹಾಗೂ ದ್ವಿತೀಯ ಪಿ.ಯು.ಸಿ. ಪರೀಕ್ಷೆಯಲ್ಲಿ 85%ಕ್ಕೂ ಹೆಚ್ಚು (ವಿಶಿಷ್ಟ ಶ್ರೇಣಿ) ಅಂಕಗಳಿಸಿ ತೇರ್ಗಡೆಯಾದ ವಿದ್ಯಾರ್ಥಿ / ವಿದ್ಯಾರ್ಥಿನಿಯರನ್ನು ದಿನಾಂಕ 5-10-2025ನೇ ಭಾನುವಾರ ಶ್ರೀ ಸುಬ್ರಹ್ಮಣ್ಯ ಸಭಾ, ಬಿಜೈ ರಸ್ತೆ, ಕರಂಗಲ್ಪಾಡಿ, ಮಂಗಳೂರು ಇಲ್ಲಿ ದಸರಾ ಪ್ರಯುಕ್ತ ನಡೆಯುವ ನಾಡಹಬ್ಬದಂದು ಮೇಲೆ ತಿಳಿಸಿದ ಪ್ರತಿಷ್ಠಾನದ ವತಿಯಿಂದ ಪುರಸ್ಕರಿಸಲಾಗುವುದು. ದಕ್ಷಿಣ ಕನ್ನಡ, ಉಡುಪಿ ಜಿಲ್ಲೆಯ ಅರ್ಹ, ಆಸಕ್ತ ವಿದ್ಯಾರ್ಥಿ / ವಿದ್ಯಾರ್ಥಿನಿಯರು ತಮ್ಮ ***ಅಂಕಪಟ್ಟಿಯ ಯಥಾ ನಕಲು, ವಿಳಾಸ, ದೂರವಾಣಿ ಸಂಖ್ಯೆ, ಪಾಸ್‌ಪೋರ್ಟ್ ಅಳತೆಯ ಭಾವಚಿತ್ರ*** ಇತ್ಯಾದಿಗಳನ್ನು ದಿನಾಂಕ 20-09-2025ನೇ ಶನಿವಾರದ ಒಳಗಡೆ ಮೇಲ್ಕಾಣಿಸಿದ ಪ್ರತಿಷ್ಠಾನದ ವಿಳಾಸಕ್ಕೆ ತಲುಪಿಸಲು ಕೋರಲಾಗಿದೆ.

**– ಕೆ. ಸದಾಶಿವ ಶಾಸ್ತ್ರಿ**

## ಪುತ್ತೂರಿನಲ್ಲಿ ಸುಸಜ್ಜಿತ 'ಶಿವಸದನ'

### ಹಿರಿಯ ನಾಗರಿಕರ ಮತ್ತು ವಿಕಲಚೇತನರ ವಸತಿ ನಿಲಯ

ಮಂಗಳೂರಿನ ಶ್ರೀ ಸುಬ್ರಹ್ಮಣ್ಯ ಸಭಾ ಆಡಳಿತದ ಪುತ್ತೂರಿನ 'ಶಿವಸದನ'ದಲ್ಲಿ ಹಿರಿಯ ನಾಗರಿಕರ ಮತ್ತು ವಿಕಲಚೇತನರ ವಸತಿ ನಿಲಯವಿದ್ದು, ಹಿರಿಯ ನಾಗರಿಕರ ವಸತಿನಿಲಯದಲ್ಲಿ 45ಕ್ಕೂ ಹೆಚ್ಚು ನಿವಾಸಿಗಳಿದ್ದು, ಇದೀಗ ವಿಕಲಚೇತನರ ವಿಶೇಷ ಶಾಲೆಗೆ (Day Care) ಮಕ್ಕಳ ದಾಖಲಾತಿ ಆರಂಭವಾಗಿದೆ. ನುರಿತ ಶಿಕ್ಷಕರಿಂದ ಇವರಿಗೆ ಹಲವಾರು ಚಟುವಟಿಕೆ, ಆಟ, ಪಾಠ, ಆರೈಕೆಗಳನ್ನು ಮಿತದರದಲ್ಲಿ ಒದಗಿಸಲಾಗುತ್ತಿದೆ. 25 ವರ್ಷ ಮೇಲ್ಪಟ್ಟ ವಿದ್ಯಾರ್ಥಿಗಳಿಗೆ ಸುಸಜ್ಜಿತ ವಸತಿನಿಲಯದಲ್ಲಿ ಉಳಿದುಕೊಳ್ಳಲು ಹಾಗೂ ಸಣ್ಣ ಮಕ್ಕಳಿಗೆ ಬೆಳಗ್ಗೆ ಗಂಟೆ 7–00ರಿಂದ ಸಂಜೆ ಗಂಟೆ 7–00ರ ವರೆಗೆ ನೋಡಿಕೊಳ್ಳುವ (Day Care) ವ್ಯವಸ್ಥೆ ಇದೆ. ಆವಶ್ಯಕತೆ ಇರುವವರಿಗೆ ಈ ಮಾಹಿತಿ ಹಂಚಿಕೊಳ್ಳಲು ವಿನಂತಿಸುತ್ತೇವೆ ಮತ್ತು ನಿಮ್ಮ ಎಲ್ಲಾ whatsapp ಗ್ರೂಪ್‌ಗಳಿಗೆ ಈ ಮಾಹಿತಿ ತಲುಪಿಸಲು ವಿನಂತಿ.

**ಹೆಚ್ಚಿನ ಮಾಹಿತಿಗಾಗಿ :** ಶ್ರೀ ಕರುಣ್ ರಾವ್ ಬೆಳ್ಳೆ – 7337634359
ಶ್ರೀಮತಿ ಸುಮಂಗಲಾ ಪ್ರಭಾಕರ್ – 9844242442
ಶ್ರೀ ಪಿ. ಶ್ರೀಕಾಂತ್ ರಾವ್ – 7795116598


ಪತ್ರಿಕೆಗೆ ಶುಭ ಬಯಸುವ–

**Dr. Jayalakshmi Devi**
**Dr. Jaganmohan, Smt. Asha Mohan**
**Akarsh M. Rao**
**Konchadi, Mangalore - 575 008**


## ಕ್ಯಾಪ್ಟನ್ ಪ್ರಮೋದ್ ಕುಮಾರ್ ತೆಂಕಿಲ



ಕ್ಯಾಪ್ಟನ್ ಪ್ರಮೋದ್ ಕುಮಾರ್ ತೆಂಕಿಲ ಇವರು ಸ್ಥಾನಿಕ ಸಮಾಜದ ಪ್ರತಿಷ್ಠಿತ ತೆಂಕಿಲ ಮನೆತನದ ನಿವೃತ್ತ ಶಿಕ್ಷಕ ಶ್ರೀಯುತ ಅಣ್ಣಪ್ಪಯ್ಯ ಮತ್ತು ವಿದ್ಯಾ ಇಲಾಖೆಯಲ್ಲಿ ಸೇವೆ ಸಲ್ಲಿಸಿದ್ದ ಎರಟಾಡಿ ಶ್ರೀಮತಿ ಶಾರದಾ ಅವರ ದ್ವಿತೀಯ ಪುತ್ರರಾಗಿರುತ್ತಾರೆ.

ಶ್ರೀಯುತರು ಪ್ರಸ್ತುತ ನವದೆಹಲಿಯ ನೇವಲ್ ಹೆಡ್‌ಕ್ವಾಟರ್ಸ್ (Naval Headquarters) ಮುಖ್ಯಕಛೇರಿಯಲ್ಲಿ ಡೈರೆಕ್ಟರ್ ಆಗಿ ಪ್ರತಿಷ್ಠಿತ ಹುದ್ದೆಯನ್ನು ಅಲಂಕರಿಸಿದ್ದಾರೆ.

*ಶ್ರೀಯುತರು ಮುಂದಿನ ವೃತ್ತಿಜೀವನದಲ್ಲಿ ಇನ್ನಷ್ಟು ಎತ್ತರಕ್ಕೆ ಬೆಳೆಯಲಿ ಎಂಬ ಹಾರೈಕೆಗಳು.* *– 'ಜ್ಞಾನಶಕ್ತಿ ಬಳಗ'*

## ಸರ್ವಸಮನ್ವಯ ಭಾವ

***ಶ್ರುತಿ ಸ್ಮೃತಿ ಪುರಾಣಾಂ ಆಲಯಂ ಕರುಣಾಲಯಂ***
***ನಮಾಮಿ ಭಾಗವತ್ಪಾದ ಶಂಕರಂ ಲೋಕಶಂಕರಂ***

ಇದು ಒಂದು ಸಮಾಜಕ್ಕೆ, ದೇಶಕ್ಕೆ ಹಾಗೂ ಇಡೀ ಜಗತ್ತಿಗೇ ಸಂಬಂಧಪಟ್ಟ ವಿಚಾರ. ನಾವು ಒಬ್ಬರನ್ನೊಬ್ಬರು ಪ್ರೀತಿಸಬೇಕು, ದ್ವೇಷಿಸಬಾರದು. ಇತರರ ಅಭಿಪ್ರಾಯವನ್ನು ಗೌರವಿಸಬೇಕು, ನಮ್ಮ ಧರ್ಮದಲ್ಲಿರುವ ಎಲ್ಲ ಸಂಪ್ರದಾಯಗಳನ್ನು ಗೌರವಿಸಿ, ಸಮನ್ವಯ ಭಾವದಲ್ಲಿರಬೇಕು. ವಸುಧೈವ ಕುಟುಂಬಕಂ ಭಾವವನ್ನು ಅನುಸರಿಸಬೇಕು. ಇದರಿಂದ ನಮ್ಮ ಸಮಾಜದ ಉದ್ಧಾರ, ದೇಶದ ಉದ್ಧಾರ ಮತ್ತು ಜಗತ್ತಿನ ಉದ್ಧಾರವೂ ಸಾಧ್ಯ.

***ಸರ್ವೇಭವಂತು ಸುಖಿನಃ ಸರ್ವೇಸಂತು ನಿರಾಮಯಾಃ ।***
***ಸರ್ವೇ ಭದ್ರಾಣಿ ಪಶ್ಯಂತು ಮಾ ಕಶ್ಚಿತ್ ದುಃಖ ಭಾಗ್ ಭವೇತ್ ॥***

॥ ಓಂ ಶಾಂತಿಃ ಶಾಂತಿಃ ಶಾಂತಿಃ ॥

*– ಕೆ. ಆರ್. ಉಪಾಧ್ಯಾಯ, ಮಂಗಳೂರು*

## ಉದ್ಯಾವರ ಬ್ರಾಹ್ಮಣ ಪರಿಷತ್ ಅಧ್ಯಕ್ಷರಾಗಿ ಶ್ರೀ ಕೆ. ಸುರೇಶ ರಾವ್ ಕುತ್ಪಾಡಿ



ಮುಂದಿನ ಎರಡು ವರ್ಷಗಳ ಅವಧಿಗೆ ಉದ್ಯಾವರ ಬ್ರಾಹ್ಮಣ ಪರಿಷತ್ ಅಧ್ಯಕ್ಷರಾಗಿ ಉಡುಪಿಯ ಶ್ರೀ ಕೆ. ಸುರೇಶ ರಾವ್, ಕುತ್ಪಾಡಿ ಇವರು ಪುನರಾಯ್ಕೆಗೊಂಡಿದ್ದಾರೆ.


ಪತ್ರಿಕೆಗೆ ಶುಭ ಬಯಸುವ –

**ಇನ್ನ ಶ್ರೀನಿವಾಸ ರಾವ್ ಹಾಗೂ**
**ಶ್ರೀಮತಿ ಪುಷ್ಪಾವತಿ ಶ್ರೀನಿವಾಸ ರಾವ್**
**ಮತ್ತು ಕುಟುಂಬ**
**ಶ್ರೀ ಗಣೇಶ ಕೃಪಾ, ಪೃಥ್ವೀ ಲೇಔಟ್, ಕೂಳೂರು, ಮಂಗಳೂರು - 575 013**



ಪತ್ರಿಕೆಗೆ ಶುಭ ಬಯಸುವ –

**ಕೆ. ಆರ್. ಉಪಾಧ್ಯಾಯ**
**ಮಂಗಳೂರು**

## ದಕ್ಷಿಣ ಕನ್ನಡ ಜಿಲ್ಲಾ 'ಸಕ್ಷಮ ಫೌಂಡೇಶನ್' ವತಿಯಿಂದ ವಿಶೇಷಚೇತನರ ಸಬಲೀಕರಣದ ಬಗ್ಗೆ ಮಾಹಿತಿ ಕಾರ್ಯಾಗಾರ ಹಾಗೂ IQVIA ಕಂಪೆನಿಯ ನಿರ್ದೇಶಕ ಶ್ರೀ ನಿಶಾಂತ್ ರಾವ್ ಅವರ ಪುತ್ರಿ ಕುಮಾರಿ ನಿಖಿತಾ ರಾವ್ ಅವರ 16ನೇ ಹುಟ್ಟುಹಬ್ಬದ ಸಂಭ್ರಮಾಚರಣೆ



ಮಂಗಳೂರಿನ ಶ್ರೀ ಸುಬ್ರಹ್ಮಣ್ಯ ಸಭಾ ಆಡಳಿತದ ವಿಶೇಷಚೇತನರ ಶಾಲೆ ಪುತ್ತೂರಿನ 'ಶಿವಸದನ'ದಲ್ಲಿ ವಿಶೇಷಚೇತನರ ಸಬಲೀಕರಣಕ್ಕೆ ಸಂಬಂಧಿಸಿದಂತೆ ಶಿಕ್ಷಕರು, ಹೆತ್ತವರು ಹಾಗೂ ಮಕ್ಕಳ ಮಿಲನ, ಪರಸ್ಪರ ಸಂವಾದ, ಅಭಿಪ್ರಾಯಗಳ ವಿನಿಮಯ, ಇದರ ಬಗ್ಗೆ ಉತ್ತಮ ಮಾಹಿತಿ ನೀಡಲು ಬಂದಿರುವ 'ಸಕ್ಷಮ' ಫೌಂಡೇಶನ್ನಿನ ಎಲ್ಲಾ ಸದಸ್ಯರಿಗೂ ನಮ್ಮ ಟ್ರಸ್ಟ್‌ನ ಹಾಗೂ ಶಿವಸದನದ ವಿಶೇಷ ಮಕ್ಕಳ, ಶಿಕ್ಷಕರ ವತಿಯಿಂದ ಮನದಾಳದ ಕೃತಜ್ಞತೆಗಳು. ದಕ್ಷಿಣ ಕನ್ನಡ ಜಿಲ್ಲೆಯ 'ಸಕ್ಷಮ ಫೌಂಡೇಶನ್' ವಿಶೇಷ ಮಕ್ಕಳಿಗಾಗಿ ಮಾಡುತ್ತಿರುವ ರಾಷ್ಟ್ರಮಟ್ಟದ ಸಂಘಟನೆಯ ಅಧ್ಯಕ್ಷರಾಗಿರುವ ಶ್ರೀ ರಾಜಶೇಖರ ಭಟ್ ಕಾಕುಂಜೆ, ವಿಕಾಸಂ ಸೇವಾ ಫೌಂಡೇಶನ್ ವ್ಯವಸ್ಥಾಪಕ ಹಾಗೂ ಮುಖ್ಯಸ್ಥರಾದ ಶ್ರೀ ಗಣೇಶ್ ಭಟ್ ವಾರಣಾಸಿ ಸಕ್ಷಮ ದ. ಕ. ಜಿಲ್ಲೆಯ ಉಪಾಧ್ಯಕ್ಷರು ಸಂವಾದ ನಡೆಸಿಕೊಟ್ಟರು. ವಿಶೇಷಚೇತನರ ಶಾಲೆ ಹಾಗೂ ವಸತಿನಿಲಯದ ಮೂರನೇ ಮತ್ತು ನಾಲ್ಕನೇ ಅಂತಸ್ತಿನ ಪ್ರಾಯೋಜಕತ್ವವನ್ನು ಪ್ರಖ್ಯಾತ ಬಹುರಾಷ್ಟ್ರೀಯ ಕಂಪೆನಿ IQVIA ಕಂಪೆನಿಯ ವತಿಯಿಂದ ಸಜ್ಜುಗೊಂಡಿದೆ. ಇದರ ನಿರ್ದೇಶಕರಾದ ಶ್ರೀ ನಿಶಾಂತ್ ರಾವ್ ಅವರ ಪುತ್ರಿ ಕುಮಾರಿ ನಿಖಿತಾ ರಾವ್ ಕಳೆದ ಜೂನ್ 16ನೇ ತಾರೀಕು ತನ್ನ 16ನೇ ವರ್ಷದ ಹುಟ್ಟುಹಬ್ಬವನ್ನು ಹೆತ್ತವರೊಂದಿಗೆ ಆಚರಿಸಿ, ಈಗ ಅದರ ಸಲುವಾಗಿ ವಿಶೇಷಚೇತನರಿಗೆ ವಿಶೇಷ ಭೋಜನವನ್ನು ಪ್ರಾಯೋಜಿಸುತ್ತಿದ್ದು, ಹುಟ್ಟುಹಬ್ಬದ ದಿನ ಇಂತಹ ಒಂದು ಸಂವಾದ ಕಾರ್ಯಕ್ರಮವನ್ನು ಆಯೋಜಿಸಿ, ಎಲ್ಲರಿಗೂ ಉಪಯುಕ್ತ ಮಾಹಿತಿಯನ್ನು ನೀಡುತ್ತಿರುವ 'ಸಕ್ಷಮ ಫೌಂಡೇಶನ್', ಇಲ್ಲಿ ನೆರೆದಿರುವ ಎಲ್ಲರೂ ಕುಮಾರಿ ನಿಖಿತಾಳಿಗೆ ಹುಟ್ಟುಹಬ್ಬದ ಶುಭಾಶಯಗಳು, ಅವಳಿಗೆ ದೇವರು ಉನ್ನತ ವಿದ್ಯಾಭ್ಯಾಸ, ಆರೋಗ್ಯ, ಸಂತೋಷ, ಅಷ್ಟೈಶ್ವರ್ಯವನ್ನು ನೀಡಿ ಕಾಪಾಡಲಿ ಎಂದು ಎಲ್ಲರ ಪರವಾಗಿ ಹಾರೈಸುತ್ತೇವೆ.

ಪ್ರತಿ ವರ್ಷವೂ ಹುಟ್ಟುಹಬ್ಬವನ್ನು ಎಲ್ಲರೂ ಈ ವಿಶೇಷ ಮಕ್ಕಳೊಂದಿಗೆ ಆಚರಿಸುವಂತಾಗಲಿ. ಈ ಸಮಾರಂಭವು ಮಕ್ಕಳೊಂದಿಗೆ ಶಿಕ್ಷಕಿಯರು ಸೇರಿ ಪ್ರಾರ್ಥನೆ, ಅತಿಥಿಗಳಿಂದ ದೀಪ ಪ್ರಜ್ವಲನೆ, ನಂತರ, ಹೂಗುಚ್ಛ ನೀಡಿ ಅತಿಥಿಗಳನ್ನು ಸ್ವಾಗತಿಸಿದರೆ, ವಿಶೇಷಚೇತನ ಶಾಲೆಯ ಶಿಕ್ಷಕಿ ಶ್ರೀಮತಿ ಭವಾನಿಯವರು ಕಾರ್ಯಕ್ರಮ ನಿರೂಪಿಸಿದರು. ಶ್ರೀಮತಿ ಅಮೃತಾರವರು ಧನ್ಯವಾದ ಸಮರ್ಪಿಸಿದರು.

ಶ್ರೀಮತಿ ಅಮಿತಾ, ಪ್ರತಿಭಾ, ಇಬ್ಬರು ಅಕ್ಕನವರು ಈ ಕಾರ್ಯಕ್ರಮದ ಯಶಸ್ಸಿಗೆ ಸಂಪೂರ್ಣ ಸಹಕಾರ ನೀಡಿದ್ದು, ಎಲ್ಲರ ಮೆಚ್ಚುಗೆಗೆ ಪಾತ್ರವಾಯಿತು. ಶಿವಸದನ ಟ್ರಸ್ಟಿನ ಅಧ್ಯಕ್ಷೆಯಾದ ಶ್ರೀಮತಿ ಸುಮಂಗಲಾ ಪ್ರಭಾಕರ್, ಕಾರ್ಯದರ್ಶಿ ಶ್ರೀ ಕರುಣ್ ರಾವ್ ಬೆಳ್ಳೆ ಹಾಗೂ ಕೋಶಾಧಿಕಾರಿ ಶ್ರೀ ದಿನಕರ್ ರಾವ್, ಟ್ರಸ್ಟಿನ ಸದಸ್ಯರಾದ ಶ್ರೀಮತಿ ಶಕುಂತಲಾ ವಿಜಯಕುಮಾರ್, ಶ್ರೀಮತಿ ಗಾಯತ್ರಿ ಪಿಲಿಂಜ, ಶ್ರೀಮತಿ ವನಿತಾ ರಾವ್, ಶ್ರೀ ಮೋಹನದಾಸ ಪಿಲಿಂಜ, ವಿಶೇಷ ಮಕ್ಕಳು ಅವರ ಹೆತ್ತವರು, ಶಿಕ್ಷಕಿಯರು, ಪೋಷಕರು ಎಲ್ಲರೂ ಈ ಸಂವಹನ ಕಾರ್ಯಕ್ರಮದಲ್ಲಿ ಪಾಲ್ಗೊಂಡು ತುಂಬಾ ಸಂತೋಷ ಪಟ್ಟರು. ಇನ್ನು ಮುಂದೆಯೂ ಇಂತಹ ಕಾರ್ಯಕ್ರಮ ನಡೆಯುತ್ತಿರಲಿ ಎಂದು ಅವರ ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ.

*ವರದಿ : ಶ್ರೀಮತಿ ಸುಮಂಗಲಾ ಪ್ರಭಾಕರ್*

**ರಾಮಾ ಅಟೋಮೊಬೈಲ್ಸ್**





ಮಾರುತಿ ವಾಹನ ತಜ್ಞರು

ಮಾಲೆಮಾರ್ ರಸ್ತೆ, ಕೊಟ್ಟಾರ ಚೌಕಿ, ಮಂಗಳೂರು - 575 006

ಫೋನ್ : 0824 - 2454355, ಮೊಬೈಲ್ : 9448545702

ಪ್ರೊ. : ಯು. ಸಂತೋಷ ಕುಮಾರ್, ಉಜ್ಜೋಡಿ

**ಶ್ರೀ ಸುಬ್ರಹ್ಮಣ್ಯ ಸಹಕಾರ ಸಂಘ (ನಿ.)**

'ಶ್ರೀ ಕುಡ್ವಿ ಪದ್ಮನಾಭಯ್ಯ ಗಾರ್ಡನ್ಸ್' ಬಿಜೈ ರಸ್ತೆ, ಮಂಗಳೂರು - 575 003

**ಶಾಖೆಗಳು** ✆ : 9880968032 / 0824-2982095

ಮಂಗಳೂರು : ಶ್ರೀ ಸುಬ್ರಹ್ಮಣ್ಯ ಸಭಾ, ಬಿಜೈ ರಸ್ತೆ
✆ : 0824 - 2491895 / 8861155454

ಪುತ್ತೂರು : ವಾಣಿಜ್ಯ ಸಂಕೀರ್ಣ ಒಂದನೇ ಮಹಡಿ, ತಾಲೂಕು ಕಚೇರಿ ರಸ್ತೆ
✆ : 08251 - 235895 / 8123659955

ಬೆಳ್ತಂಗಡಿ : 'ಬೃಂದಾವನ', ಸಂತೆಕಟ್ಟೆ (ಬಸ್‌ಸ್ಟಾಂಡ್ ಎದುರು)
✆ : 08256 - 234076 / 8867269944

ಸುರತ್ಕಲ್ : 'ಪೂವ ಆರ್ಕೇಡ್' ✆ : 0824 - 2477895 / 9611550803

ಕಾರ್ಕಳ : 'ಶ್ರೀ ಶಂಕರ', ಪ್ರಸಾದ್ ಭವನ ಕಂಪೌಂಡು
ಅನಂತಶಯನ ದೇವಸ್ಥಾನದ ಹತ್ತಿರ, ತೆಳ್ಳಾರ್ ರೋಡ್
✆ : 08258 - 235544 / 9980528800

ಸುಳ್ಯ : ಶ್ರೀ ಗಣೇಶ ವಾಣಿಜ್ಯ ಸಂಕೀರ್ಣ, ಹಳೇ ಬಸ್‌ಸ್ಟಾಂಡ್ ಎದುರು
✆ : 08257 - 233895 / 8147539955

ಬಿ.ಸಿ. ರೋಡ್ : ಲಕ್ಷ್ಮೀ ಮಹಲ್ ✆ : 08255 - 233895 / 8792464344

ವಿಟ್ಲ : ಅಪ್ಪಾಜಿ ರಾವ್ ಕಾಂಪ್ಲೆಕ್ಸ್, ಖಾಸಗಿ ಬಸ್‌ನಿಲ್ದಾಣದ ಬಳಿ
✆ : 08255 - 239895 / 8147469955

ಮೂಡಬಿದ್ರೆ : ವಾಸುದೇವ ಕಾಂಪ್ಲೆಕ್ಸ್, ಯೂನಿಯನ್ ಬ್ಯಾಂಕ್ ಮೇಲುಗಡೆ
✆ : 08258 - 200161 / 8147549955

ಪದವಿನಂಗಡಿ : ಶ್ರೀ ವೆಂಕಟರಮಣ ದೇವಸ್ಥಾನದ ಹಿಂಭಾಗ
✆ : 9731405917

ಕುತ್ತಾರ್ : ಹಸನ್ ಎನ್‌ಕ್ಲೇವ್, ಇಂಡಿಯನ್ ಓವರ್‌ಸೀಸ್ ಬ್ಯಾಂಕ್‌ನ ಬಳಿ
✆ : 8792034344

ಕಿನ್ನಿಗೋಳಿ : ಡೈಮಂಡ್ ಆರ್ಕೇಡ್ ಕಟ್ಟಡ, ಕಿನ್ನಿಗೋಳಿ ಬಸ್‌ಸ್ಟಾಂಡ್ ಹತ್ತಿರ
✆ : 8197677575

ಪಡೀಲ್ ಪುತ್ತೂರು : ವಿಜಯಲಕ್ಷ್ಮೀ ಕಾಂಪ್ಲೆಕ್ಸ್ ✆ : 9740775967

ಕೊಕ್ರಾಡಿ : ವೃದ್ಧಿ ಕಾಂಪ್ಲೆಕ್ಸ್, ಜಂತಿಗೋಳಿ ಕ್ರಾಸ್, ಬೆಳ್ತಂಗಡಿ
✆ : 9741443470

ಕುಂಜತ್‌ಬೈಲ್ : ನಮ್ರದೀಪ್ ಕಾಂಪ್ಲೆಕ್ಸ್, ಕೋಸ್ಟಲ್ ಗಾರ್ಡ್ ಎದುರು
✆ : 9740925733

ಕೋಡಿಕ್ಕಲ್ : ಸುಗಂಧಿ ಪರ್ಲ್ಸ್, ಮೈನ್ ರೋಡ್, 7th ಕ್ರಾಸ್, ಮಂಗಳೂರು
✆ : 9945916755

ಕುಲಶೇಖರ : ಅಕಯ್ದ ಕಾಂಪ್ಲೆಕ್ಸ್, ಶಕ್ತಿನಗರ ಅಡ್ಡ ರಸ್ತೆ
ಲ್ಯೂಮಿನಸ್ ಅಪಾರ್ಟ್‌ಮೆಂಟ್ ಬಳಿ, ಪದವು, ಕುಲಶೇಖರ, ಮಂಗಳೂರು
✆ : 8904801404

**ಆಕರ್ಷಕ ಪ್ರತಿಫಲದ ನಮ್ಮ ಠೇವಣಿ ಯೋಜನೆಗಳು**

| ನಿರಖು ಠೇವಣಿ (F.D.) | |
|---|---|
| 45 ದಿನಗಳಿಂದ 180 ದಿನಗಳ ವರೆಗೆ | - 5% |
| 181 ದಿನಗಳಿಂದ 394 ದಿನಗಳ ವರೆಗೆ | - 6% |
| 13 ತಿಂಗಳು ಮೇಲ್ಪಟ್ಟು | - 9% |
| ಹಿರಿಯ ನಾಗರಿಕರಿಗೆ, ಸಂಘ–ಸಂಸ್ಥೆಗಳಿಗೆ 0.5% ಹೆಚ್ಚುವರಿ ಬಡ್ಡಿ | |

| ಶ್ರೀ ಸುಬ್ರಹ್ಮಣ್ಯ ನಗದು ಪತ್ರ (CASH CERTIFICATE) ANNUALISED | | |
|---|---|---|
| ಆವರ್ತನ ಖಾತೆ (RECURRING DEPOSIT) | - | 8% |
| ಉಳಿತಾಯ ಖಾತೆ (SAVINGS BANK) | - | 3% |
| ಮಧುಸಂಚಯ ಖಾತೆ (PIGMY DEPOSIT) | - | 3% |

**FIXED DEPOSIT**
ಠೇವಣಿಗಳ ಮೇಲೆ **9.5%**
ಹಿರಿಯ ನಾಗರಿಕರಿಗೆ 0.5% ಹೆಚ್ಚುವರಿ ಬಡ್ಡಿ
ಆಕರ್ಷಕ ಬಡ್ಡಿದರಗಳು

**ನಿಮ್ಮ ಹೂಡಿಕೆಗಳು**
ಕೇವಲ **88** ತಿಂಗಳಲ್ಲಿ
**ದ್ವಿಗುಣವಾಗುವುದು**

**ಲಕ್ಷಾಧೀಶ ಯೋಜನೆ**
ರೂ. **1,00,000/-**

ಪ್ರತಿ ತಿಂಗಳಿಗೆ ರೂ. 1,350 ತೊಡಗಿಸಿ 60 ತಿಂಗಳಲ್ಲಿ
ಪ್ರತಿ ತಿಂಗಳಿಗೆ ರೂ. 2,450 ತೊಡಗಿಸಿ 36 ತಿಂಗಳಲ್ಲಿ
ಪ್ರತಿ ತಿಂಗಳಿಗೆ ರೂ. 3,800 ತೊಡಗಿಸಿ 24 ತಿಂಗಳಲ್ಲಿ

**ಚಿನ್ನಾಭರಣ ಸಾಲ**
ಪ್ರತಿ ಗ್ರಾಂ ಗೆ ₹ **6,800/-**ರ ತನಕ

ಪತ್ರಿಕೆಗೆ ಶುಭ ಬಯಸುವ–

ಮೊಬೈಲ್ : 9972989678
9448104174

**ರವಿಕಿರಣ್ ಕ್ಶೈಲ**, ಬಿ.ಎ., ಎಲ್‌ಎಲ್.ಬಿ.
ವಕೀಲರು ಮತ್ತು ದ. ಕ. ಜಿಲ್ಲಾ ನೋಟರಿ (ಭಾರತ ಸರ್ಕಾರ)
2ನೇ ಮಹಡಿ, ಕಾಮತ್ ಕಟ್ಟಡ, ಉಪ್ಪಿನಂಗಡಿ
ಪುತ್ತೂರು ತಾಲೂಕು, ದ. ಕ., 574 241

## ‘ಕುಡುಪು ಶ್ರೀಮತಿ ಗಿರಿಜಮ್ಮ ಮತ್ತು ಶ್ರೀ ಸುಬ್ಬರಾವ್ ಸ್ಮಾರಕ ವಿದ್ಯಾರ್ಥಿ ವೇತನ ನಿಧಿ’




ಶ್ರೀ ಸುಬ್ರಹ್ಮಣ್ಯ ಸಭಾದಲ್ಲಿ ಸ್ಥಾಪಿಸಿರುವ ‘ಕುಡುಪು ಶ್ರೀಮತಿ ಗಿರಿಜಮ್ಮ ಮತ್ತು ಶ್ರೀ ಸುಬ್ಬರಾವ್ ಸ್ಮಾರಕ ವಿದ್ಯಾರ್ಥಿವೇತನ ನಿಧಿ’ಗೆ ಅವರ ಪುತ್ರ ಶ್ರೀ ನಾಗರಾಜ ಭಟ್ ಮತ್ತು ಸೊಸೆ ಶ್ರೀಮತಿ ಶಕುಂತಲಾ ನಾಗರಾಜ್ ಭಟ್ ಇವರು ರೂ. 25,000/– ದೇಣಿಗೆ ನೀಡಿರುವರು. ಈ ಹಿಂದೆ ರೂ. 55,000/– ನೀಡಿ ಈ ನಿಧಿಯನ್ನು ಸ್ಥಾಪಿಸಿದ್ದು, ಈಗ ರೂ. 80,000/–ಕ್ಕೆ ಹೆಚ್ಚಿಸಿರುವರು. ಅವರಿಗೆ ಶ್ರೀ ಸುಬ್ರಹ್ಮಣ್ಯ ಸಭಾದ ಪರವಾಗಿ ಅನಂತ ಧನ್ಯವಾದಗಳು.

## ‘ದಾನಿಗಳಿಂದ ನೇರ ವಿದ್ಯಾರ್ಥಿಗಳಿಗೆ’ ಸ್ಕಾಲರ್‌ಶಿಪ್

ಶ್ರೀ ಸುಬ್ರಹ್ಮಣ್ಯ ಸಭಾದ ‘ದಾನಿಗಳಿಂದ ನೇರ ವಿದ್ಯಾರ್ಥಿಗಳಿಗೆ’ ಸ್ಕಾಲರ್‌ಶಿಪ್ ನೀಡುವ ಕಾರ್ಯಕ್ರಮಕ್ಕೆ ಹೈದರಾಬಾದಿನ ಶ್ರೀ ಬಿ. ಆರ್. ರಾವ್ ಅವರು ರೂ. 6,00,000/– ದೇಣಿಗೆ ನೀಡಿದ್ದು, ಅದನ್ನು ಅವರು ಸೂಚಿಸಿದಂತೆ ಉನ್ನತ ವೃತ್ತಿ ಶಿಕ್ಷಣವನ್ನು ಪಡೆಯುವ ವಿದ್ಯಾರ್ಥಿಗಳಿಗೆ ವಿತರಿಸಲಾಗುವುದು. ಅವರಿಗೆ ಶ್ರೀ ಸುಬ್ರಹ್ಮಣ್ಯ ಸಭಾದ ಪರವಾಗಿ ವಂದನೆಗಳು.

## ಡಾ| ಶರತ್ ಕೆ. ರಾವ್ ಅವರಿಗೆ ಎಫ್.ಆರ್.ಸಿ.ಪಿ. ಪ್ರಶಸ್ತಿ



ಮಾಹೆ ವಿಶ್ವವಿದ್ಯಾನಿಲಯದ ಸಹಕುಲಪತಿ ಡಾ| ಶರತ್ ಕುಮಾರ್ ರಾವ್ ಕೆ. ಅವರು ವೈದ್ಯಕೀಯ ನಾಯಕತ್ವ ಮತ್ತು ಆರೋಗ್ಯ ನಿರ್ವಹಣೆಯಲ್ಲಿ ಸಲ್ಲಿಸಿದ ವಿಶೇಷ ಕೊಡುಗೆಯನ್ನು ಗುರುತಿಸಿ ಲಂಡನ್‌ನ ರಾಯಲ್ ಕಾಲೇಜ್ ಆಫ್ ಫಿಸಿಷಿಯನ್ಸ್‌ನಿಂದ ಗೌರವ ಡಾಕ್ಟರೇಟ್ (ಎಫ್.ಆರ್.ಸಿ.ಪಿ.) ಜುಲಾಯಿ 8ರಂದು ಲಂಡನ್‌ನ ರಾಯಲ್ ಕಾಲೇಜಿನಲ್ಲಿ ನಡೆದ ಸಮಾರಂಭದಲ್ಲಿ ನೀಡಿ ಗೌರವಿಸಲಾಯಿತು.

2023ರಿಂದ ಮಾಹೆ ಸಹ ಕುಲಪತಿಯಾಗಿರುವ, ಅದಕ್ಕೂ ಮೊದಲು ಕೆಎಂಸಿ ಡೀನ್ ಆಗಿದ್ದರು. ಆರ್ಥೋಪೆಡಿಕ್ಸ್ ವಿಭಾಗದ ಮುಖ್ಯಸ್ಥರಾಗಿಯೂ ಕಾರ್ಯ ನಿರ್ವಹಿಸಿದ್ದರು. ಸಂಸ್ಥೆಯ ಬೆಳವಣಿಗೆ, ಶೈಕ್ಷಣಿಕ ಫಲಿತಾಂಶಗಳ ಸುಧಾರಣೆ, ಕ್ಲಿನಿಕಲ್ ತರಬೇತಿ, ಸದೃಢತೆಗೆ ನಿರಂತರ ಶ್ರಮಿಸಿರುವ ಸಾಧನೆಯನ್ನು ಗುರುತಿಸಿ ಪ್ರಶಸ್ತಿ ಪ್ರದಾನ ಮಾಡಲಾಗಿದೆ. ಮಾಹೆ ಸಹ ಕುಲಾಧಿಪತಿ ಡಾ| ಎಚ್. ಎಸ್. ಬಲ್ಲಾಳ್, ಕುಲಪತಿ ಲೆ| ಜ| ಡಾ| ಎಂ. ಡಿ. ವೆಂಕಟೇಶ್ ಅವರು ಡಾ| ಶರತ್ ಕುಮಾರ್ ರಾವ್ ಅವರ ಸಾಧನೆಯನ್ನು ಶ್ಲಾಘಿಸಿದ್ದಾರೆ.

Manish Rao U.

Tel : (O) 2223301
Mobile : 9448726499 / 8884284939


NAVA COMPUTERS

Dealers in : C. C. Camera, Theft Alarm, Remote Locks
Computers Hardware and Peripherals
Computer Sales & Services



1st Floor, Bharath Building, P. M. Rao Road, Hampankatta, Mangaluru - 575 001

## ‘ಶಿವಸದನ’ದ ಉದ್ಯೋಗಿಗಳಿಗೆ ಸಮವಸ್ತ್ರ ವಿತರಣೆ




ಪುತ್ತೂರು ‘ಶಿವಸದನ ಚಾರಿಟೇಬಲ್ ಟ್ರಸ್ಟ್’ನ ಗೌರವ ಅಧ್ಯಕ್ಷರಾದ ಶ್ರೀ ಎಂ. ಎಸ್. ರಘುನಾಥ ರಾವ್ ಇವರು ಶಿವಸದನದ ಸಿಬ್ಬಂದಿಯವರಿಗೆ ಹಾಗೂ ವಿಶೇಷಚೇತನ ಶಾಲೆಯ ಆಯಾನವರಿಗೂ ತಲಾ ಎರಡೆರಡು ಸೆಟ್ ಸುಂದರವಾದ ಸಮವಸ್ತ್ರ ನೀಡಿರುತ್ತಾರೆ.

ಹಾಗೆಯೇ ಅಲ್ಲಿಯ ನಿವಾಸಿಗಳಿಗೆ ದಿನಪತ್ರಿಕೆ ಓದುವರೇ ಪತ್ರಿಕೆಗಳನ್ನು, ಮ್ಯಾಗಝೀನ್, ಪುಸ್ತಕಗಳನ್ನು ಅಚ್ಚುಕಟ್ಟಾಗಿ ಜೋಡಿಸಲು ಸ್ಟೀಲ್‌ಸ್ಟ್ಯಾಂಡ್ ಒದಗಿಸಿದ್ದಾರೆ. ಈಗ ಅಲ್ಲಿಗೆ ಭೇಟಿ ನೀಡುವವರಿಗೆ ನಮ್ಮ ಸಿಬ್ಬಂದಿ ವರ್ಗದವರ ಕಡೆಯಿಂದ ಒಂದು ಸುಂದರ, ಆಕರ್ಷಿತ ವಾತಾವರಣ, ಪ್ರೀತಿಪೂರ್ವಕವಾದ ನಗುಮೊಗದ ಸ್ವಾಗತ, ಪ್ರೀತಿಯ ಸಮಾಧಾನದ ಮಾತುಗಳು ಎಲ್ಲರೂ ಗುರುತಿಸುವಂತೆ ಮಾಡಿರುವರು. ಸೇವಾಭಾವನೆಯ ನಮ್ಮ ಗೌರವಾಧ್ಯಕ್ಷರಿಗೆ ‘ಶಿವಸದನ’ದ ಸದಸ್ಯರ ಪರವಾಗಿ ಧನ್ಯವಾದಗಳು.

***ವರದಿ : ಶ್ರೀಮತಿ ಸುಮಂಗಲಾ ಪ್ರಭಾಕರ್, ಅಧ್ಯಕ್ಷರು, ಶಿವಸದನ ಚಾರಿಟೇಬಲ್ ಟ್ರಸ್ಟ್***

## ಶ್ರೀ ಸುಬ್ರಹ್ಮಣ್ಯ ಸಭಾದ ಅಡುಗೆ ಮನೆಗೆ ಹೊಸ ಗ್ರೈಂಡರ್ ಖರೀದಿಸಿದ್ದು, ಇದಕ್ಕೆ ಧನಸಹಾಯ ನೀಡಿದವರು



ಶ್ರೀ ಸಂತೋಷ್ ಕುಮಾರ್ ಯು. ರೂ 10,000/– ಶ್ರೀ ಜನಕರಾಜ್ ರೂ. 5,000/–, ಶ್ರೀ ನಾಗರಾಜ್ ಶರ್ಮ ರೂ. 5,000/–, ಶ್ರೀ ಸಾಯಿಪ್ರಸಾದ್ ರೂ. 3,000–00, ಶ್ರೀ ಮನೀಷ್ ರಾವ್ ರೂ. 2,000/–ಅವರಿಗೆ ಶ್ರೀ ಸುಬ್ರಹ್ಮಣ್ಯ ಸಭಾದ ಪರವಾಗಿ ಧನ್ಯವಾದಗಳು.



Freelance Makeup & Hairstyle Artistry

Swapna_rao_makeoverartistry

BRIDAL / PRE / POST WEDDING FUNCTIONS /
OTHER PERSONAL EVENTS & PARTIES

Rental Jewellery / Saree Pre-pleating Service available



For Bookings and Enquiries
Swapna Vallish : 9972465209 / 7892235761

PREETHIKA AUTOMOBILES

2493633
9845851573

Wholesale & Retail Dealers in :
2 & 3 WHEELERS, SPARES & ACCESSORIES
KARANGALPADY, MANGALORE - 575 003

Dealers in :
Minda Switches, M. K. Products, Swiss Auto Products, Power Coils

ಪತ್ರಿಕೆಗೆ ಶುಭ ಬಯಸುವ–

ಡಾ. ದಿವಾಕರ್ ರಾವ್ ಹಾಗೂ
ಶ್ರೀಮತಿ ಸ್ನೇಹಲತಾ ಮತ್ತು ಕುಟುಂಬ
ಮೌರಿಷ್ಕ ಪ್ಯಾಲೇಸ್, ಸಿ. ವಿ. ನಾಯಕ್ ಹಾಲ್ ಬಳಿ
ಕದ್ರಿ, ಮಂಗಳೂರು - 575 003


# ‘ಶಿವಸದನ’ದಲ್ಲಿ ಶ್ರೀ ಕಾಪು ಸುಧಾಕರ್ ರಾವ್ ಇವರ ಹುಟ್ಟುಹಬ್ಬದ ಸಂಭ್ರಮ




ಪುತ್ತೂರಿನ ‘ಶಿವಸದನ’ ಹಿರಿಯ ನಾಗರಿಕರ ಮತ್ತು ವಿಶೇಷ ಚೇತನರ ವಸತಿನಿಲಯಕ್ಕೆ ತನ್ನ ಶ್ರೀಮತಿಯ ಚಿಕ್ಕಪ್ಪ ಇಲ್ಲಿನ ನಿವಾಸಿ ಪರೀಕ ಶ್ರೀ ವಾದಿರಾಜ ರಾವ್ ಇವರನ್ನು ಯೋಗಕ್ಷೇಮ ವಿಚಾರಿಸಿ ಅವರ ಒಟ್ಟಿಗೆ ಸಮಯ ಕಳೆಯಲು ಬಂದ ಶ್ರೀ ಸುಧಾಕರ ರಾವ್ ತಮ್ಮ 78ನೇ ಹುಟ್ಟುಹಬ್ಬವನ್ನು ವಿಶೇಷ ಭೋಜನವನ್ನು ಪ್ರಾಯೋಜಿಸುವ ಮೂಲಕ ಆಚರಿಸಿದರು. ಶ್ರೀ ಸುಧಾಕರ್ ರಾವ್ ಮತ್ತು ಶ್ರೀಮತಿ ಜ್ಯೋತಿ ರಾವ್ ದೀಪ ಬೆಳಗಿಸಿದರು.

ಅವರಿಗೆ ಆರತಿಶಾಸ್ತ್ರ ಮಾಡುವಾಗ ಹುಟ್ಟುಹಬ್ಬದ ಸಂಭ್ರಮದ ಗೀತೆಯನ್ನು ಹಾಡಲಾಯಿತು. ಪುತ್ತೂರಿನ ಶಿವಸದನಕ್ಕೆ ದಂಪತಿಗಳು ದೇಣಿಗೆ ನೀಡಿದರು. ‘ಶಿವಸದನ’ ಸಿಬ್ಬಂದಿ ವರ್ಗದವರು, ಪುತ್ತೂರಿನ ಬಂಧುಗಳು, ಟ್ರಸ್ಟ್ ಸದಸ್ಯರು ಎಲ್ಲರೂ ಭೋಜನ ವ್ಯವಸ್ಥೆಯಲ್ಲಿ ಸಹಕರಿಸಿದರೆ ‘ಶಿವಸದನ’ ಮತ್ತು ಸಮಾಜಕ್ಕೆ ಸೇತುವೆಯ ಕೊಂಡಿಯಾಗಿರುವ ಡಾ। ಗಾನ ಪಿಲಿಂಜ ಕಾರ್ಯಕ್ರಮದ ಫೋಟೋ, ವೀಡಿಯೋ ನೀಡಿ ಸಹಕರಿಸಿದರು. *ವರದಿ : ಶ್ರೀಮತಿ ಸುಮಂಗಲಾ ಪ್ರಭಾಕರ್*

# ಅಲ್ಲಿದೆ ನಮ್ಮನೆ... ಇಲ್ಲಿರುವುದು ಸುಮ್ಮನೆ...



**ಬಜೆ ಶ್ರೀ ಪರಶುರಾಮ ರಾವ್** (ಪಿ. ಆರ್. ರಾವ್) (77) ತಾ. 14–07–2025ನೇ ಸೋಮವಾರ ಬೆಂಗಳೂರಿನಲ್ಲಿ ನಿಧನ ಹೊಂದಿದರು. ಅವರು ಪತ್ನಿ, ಓರ್ವ ಪುತ್ರ, ಓರ್ವ ಪುತ್ರಿಯನ್ನು ಅಗಲಿದ್ದಾರೆ. ಅವರು ಬೆಂಗಳೂರಿನ ಅಖಿಲ ಭಾರತ ಸ್ಥಾನಿಕ ಬ್ರಾಹ್ಮಣ ಸಂಘದ ಜೊತೆ ಕಾರ್ಯದರ್ಶಿಯಾಗಿ ಹಾಗೂ ಬೆಂಗಳೂರಿನಲ್ಲಿ ಟ್ರಾಫಿಕ್ ವಾರ್ಡನ್ ಆಗಿ ಸೇವೆ ಸಲ್ಲಿಸಿದ್ದಾರೆ.

●●●




**ಎಳ್ಳೂರ್ ಶ್ರೀ ದಿವಾಕರ್ ರಾವ್** (77) ತಾ. 12–07–2025ನೇ ಶನಿವಾರ ನಿಧನರಾದರು. ಇವರು ಪತ್ನಿ, ಮೂರು ಮಕ್ಕಳನ್ನು ಅಗಲಿದ್ದಾರೆ.

●●●




ಪಡುಬಿದ್ರಿ ಪಾದೆಬೆಟ್ಟು ದಿ। ರಾಮ ಶರ್ಮ ಇವರ ಪುತ್ರಿ **ಸರೋಜಾ** (76) ಇವರು ದಿನಾಂಕ 02–07–2025ನೇ ಬುಧವಾರ ನಿಧನರಾದರು.

●●●



**ಡಾ. ನಂದಳಿಕೆ ಆಶಿತ್ ಎ. ರಾವ್** (75) ತಾ. 27–6–2025ನೇ ಶುಕ್ರವಾರ ಗೋವಂಡಿಯಲ್ಲಿ ನಿಧನರಾದರು. ಅವರು ಪತ್ನಿ, ಓರ್ವ ಪುತ್ರ ಮತ್ತು ಓರ್ವ ಪುತ್ರಿಯನ್ನು ಅಗಲಿದ್ದಾರೆ.

●●●



**ನೂಂಜ ವೆಂಕಟರಮಣ ರಾಯರು** (90) ತಾ. 29–06–2025ನೇ ಶನಿವಾರ ತೊಕ್ಕೊಟ್ಟಿನ ಬಳಿ ಇರುವ ತಮ್ಮ ನಿವಾಸದಲ್ಲಿ ನಿಧನರಾದರು. ಮೃದು ಶಾಂತಸ್ವಭಾವದವರಾಗಿದ್ದ ಶ್ರೀಯುತರು ನಿವೃತ್ತ ಶಿಕ್ಷಕರಾಗಿದ್ದರು. ಅವರು ತಮ್ಮ ಇಬ್ಬರು ಪುತ್ರರು, ಇಬ್ಬರು ಪುತ್ರಿಯರು, ಮೊಮ್ಮಕ್ಕಳು ಹಾಗೂ ಅಪಾರ ಬಂಧು ವರ್ಗವನ್ನು ಅಗಲಿದ್ದಾರೆ.



**ಶ್ರೀಮತಿ ಗಾಯತ್ರಿ** (75) ತಾ. 8–07–2025ನೇ ಮಂಗಳವಾರ ನಿಧನರಾದರು. ಅವರು ಓರ್ವ ಪುತ್ರ ಮತ್ತು ಓರ್ವ ಪುತ್ರಿಯನ್ನು ಅಗಲಿದ್ದಾರೆ.

●●●



**ಪಡುಮಲೆ ವೆಂಕಟರಮಣ** (60) ತಾ. 7–07–2025ನೇ ಸೋಮವಾರ ಮೈಸೂರಿನಲ್ಲಿ ನಿಧನರಾದರು. ಅವರು ಪತ್ನಿ, ಓರ್ವ ಪುತ್ರ, ಓರ್ವ ಪುತ್ರಿಯನ್ನು ಅಗಲಿದ್ದಾರೆ.

●●●



**ಬಾಲಚಂದ್ರ ನಟ್ಟೋಜಿ** (83) ತಾ. 26–06–2025 ಗುರುವಾರ ಬಪ್ಪಳಿಗೆಯಲ್ಲಿ ನಿಧನರಾದರು. ಇವರು ಓರ್ವ ಪುತ್ರ, ಓರ್ವ ಪುತ್ರಿಯನ್ನು ಅಗಲಿದ್ದಾರೆ.

●●●



**ಉಬರಳೆ ಶ್ರೀಮತಿ ವೇದಾವತಿ (ಭವಾನಿ)** (64) ಇವರು ತಾ. 25–06–2025ನೇ ಬುಧವಾರ ನಿಧನರಾದರು.

●●●




**ಶಿಶಿಲ ಪುರುಷೋತ್ತಮ (ಶೇಖರ್) ರಾವ್** ಇವರು ತಾ. 25–06–2025ನೇ ಬುಧವಾರ ನಿಧನರಾದರು. ಇವರು ಪತ್ನಿ, ಇಬ್ಬರು ಪುತ್ರರನ್ನು ಅಗಲಿದ್ದಾರೆ.

●●●



**ನಾಳ ಹೊಸಮನೆ ಗುಂಡೂರಾವ್ ನಾಳ** (72) ಇವರು ತಾ. 16–07–2025ನೇ ಬುಧವಾರ ನಿಧನರಾದರು. ಇವರು ಇಬ್ಬರು ಪುತ್ರರು, ಓರ್ವ ಪುತ್ರಿಯನ್ನು ಅಗಲಿದ್ದಾರೆ.

●●●



**ದೇವರಾವ್ ಕೆ. ಎಸ್.** (95) ಇವರು ತಾ. 15–07–2025ನೇ ಮಂಗಳವಾರ ನಿಧನರಾದರು. ಇವರು ಪತ್ನಿ, ಓರ್ವ ಪುತ್ರ, ಓರ್ವ ಪುತ್ರಿಯನ್ನು ಅಗಲಿದ್ದಾರೆ.

ಪತ್ರಿಕೆಗೆ ಶುಭ ಬಯಸುವ–



**ಶ್ರೀ ನಾಗರಾಜ್ ಶರ್ಮ**
ಹಾಗೂ
**ಶ್ರೀಮತಿ ಆರತಿ ಶರ್ಮ**
‘ಶರ್ಮ’, ನಾಗನಕಟ್ಟೆ ಹತ್ತಿರ, ಮುಂಡಾನ, ಕದ್ರಿ ಕಂಬಳ ರಸ್ತೆ
ಮಂಗಳೂರು - 575 002 ✆ : 9880258216

ಪತ್ರಿಕೆಗೆ ಶುಭ ಬಯಸುವ–



**ಶ್ರೀ ಸೋಮಶೇಖರನ್**
ಮತ್ತು
**ಶ್ರೀಮತಿ ಅರುಣಾ ಸೋಮಶೇಖರನ್**
ಚಿಲಿಂಬಿ, ಮಂಗಳೂರು



**PRAMOD**
**AUTOMOBILES**
30 Years of Service
KARANGALPADY
MANGALORE- 575 003
Ph. : 2493633 (O)
2212723 (R)
M. : 9448260225
Wholesale & Retail Dealers in
2 & 3 WHEELERS SPARES & ACCESSORIES
Prop. : Ln. K. HARSHA KUMAR

**PRAVEEN KUMAR ADYAPADY**
NOTARY & ADVOCATE
MANGALORE OFFICE
JANVI PLAZA, IInd FLOOR
BUNTS HOSTEL, MANGALORE
BAJPE OFFICE
OZANAM COMPLEX, IInd FLOOR
CHURCH BUILDING, MAIN ROAD, BAJPE
0824 - 2254478 (O) 9620392584, 9448724981(M), 2254448 (R)
We undertakes : Civil, Criminal, Motor Vehicles,
A.C., D.C. Cases, Land Conversion, Registration etc.

# ಅಪಾರಕೀರ್ತಿ ಗಳಿಸಿ



**ಕು। ಅದಿತಿ ಎನ್. ಕೆ.** ಈ ಬಾರಿಯ ಬೆಂಗಳೂರು ವಿಶ್ವವಿದ್ಯಾಲಯದ ಎಂ.ಎಸ್ಸಿ. ಪರೀಕ್ಷೆಯಲ್ಲಿ ಶೇ 9.4 ಅಂಕಗಳಿಸಿ ಉನ್ನತ ಶ್ರೇಣಿಯಲ್ಲಿ ತೇರ್ಗಡೆ ಹೊಂದಿದ್ದಾಳೆ. ಇವಳು ಶ್ರೀ ಅರುಣ್ ನಂದಾವರ ಕೌಳಿಗೆ ಮತ್ತು ಶ್ರೀಮತಿ ಅನುಪಮ ರಾವ್ ಇವರ ಪುತ್ರಿ.

●●●



**ಕು। ಐ. ಅಂಕಿತಾ ರಾವ್** ಈ ಬಾರಿಯ ಎಸ್.ಎಸ್.ಎಲ್.ಸಿ. ಪರೀಕ್ಷೆಯಲ್ಲಿ ಶೇ. 92 (575/625) ಅಂಕಗಳಿಸಿ ಉನ್ನತ ಶ್ರೇಣಿಯಲ್ಲಿ ತೇರ್ಗಡೆ ಹೊಂದಿದ್ದಾಳೆ. ಇವಳು ಇಡಯ ಶ್ರೀ ಗೋಪಾಲಕೃಷ್ಣ ಮತ್ತು ಶ್ರೀಮತಿ ಕವಿತಾರವರ ಪುತ್ರಿ.

# ಕು। ರಾಧಿಕಾ ಕೆ. ಜಿ. ಇವರಿಗೆ ಡಾಕ್ಟರೇಟ್ ಪದವಿ



ಮಂಗಳೂರು ವಿಶ್ವವಿದ್ಯಾಲಯವು ಕು। ರಾಧಿಕಾ ಇವರು ಬರೆದಿರುವ *'ಇಂಡಿಯನ್ ಟ್ರೇಡ್ ಪರ್ಫಾಮೆನ್ಸ್ ಇನ್ ದಿ ಪೋಸ್ಟ್ ರಿಫಾರ್ಮ್ ಪಿರೆಡ್'* ಎಂಬ ಪ್ರಬಂಧಕ್ಕೆ ಡಾಕ್ಟರೇಟ್ ಪದವಿ ಪ್ರದಾನ ಮಾಡಿದೆ. ಅರ್ಥಶಾಸ್ತ್ರ ವಿಭಾಗದಲ್ಲಿ ಸಂಶೋಧಕರಾಗಿ ಕಾರ್ಯನಿರ್ವಹಿಸಿ ಸದ್ಯ ಮಂಗಳೂರಿನ ವಿಶ್ವವಿದ್ಯಾಲಯದ ಕಾಲೇಜಿನಲ್ಲಿ ಅತಿಥಿ ಉಪನ್ಯಾಸಕರಾಗಿ ಕಾರ್ಯನಿರ್ವಹಿಸುತ್ತಿದ್ದಾರೆ. ಮಂಗಳೂರಿನ ವಿಶ್ವವಿದ್ಯಾಲಯದ ಕಾಲೇಜಿನಲ್ಲಿ ಅರ್ಥಶಾಸ್ತ್ರ ಪ್ರಾಧ್ಯಾಪಕರಾಗಿರುವ ಡಾ. ಜಯವಂತ ನಾಯಕ್ ಇವರ ಮಾರ್ಗದರ್ಶನದಲ್ಲಿ ಈ ಪ್ರಬಂಧವನ್ನು ಪ್ರಸ್ತುತಪಡಿಸಿದ್ದಾರೆ. ಕ್ಯಾಂಪ್ಕೋದಲ್ಲಿ ಉದ್ಯೋಗಿಯಾಗಿದ್ದ ಸುಳ್ಯದ ಶ್ರೀ ಗೋಪಾಲಕೃಷ್ಣ ಕೆ. ಮತ್ತು ಶ್ರೀಮತಿ ಜಲಜಾಕ್ಷಿ ದಂಪತಿಗಳ ಪುತ್ರಿಯಾಗಿದ್ದು, ಎಂ.ಕಾಂ. ಹಾಗೂ ಎಂ.ಎ. (ಅರ್ಥಶಾಸ್ತ್ರ) ಪದವಿ ಪಡೆದಿರುತ್ತಾರೆ.

# ಶ್ರೀ ರಾಜೇಂದ್ರ ಕೇದಿಗೆ ಅವರಿಗೆ ಪ್ರತಿಷ್ಠಿತ ಕರ್ನಾಟಕ ಲಲಿತಕಲಾ ಅಕಾಡೆಮಿ ಪ್ರಶಸ್ತಿ



ಅವಿಭಜಿತ ದಕ್ಷಿಣ ಕನ್ನಡ ಜಿಲ್ಲೆಯ ಹಿರಿಯ ಕಲಾವಿದರಾದ ಶ್ರೀ ರಾಜೇಂದ್ರ ಕೇದಿಗೆ ಅವರು ಮೇ 23 ಶುಕ್ರವಾರದಂದು ಬೆಂಗಳೂರಿನ ರವೀಂದ್ರ ಕಲಾಕ್ಷೇತ್ರದಲ್ಲಿ ನಡೆದ ಸನ್ಮಾನ ಸಮಾರಂಭದಲ್ಲಿ ರಾಜ್ಯದ ಅತ್ಯಂತ ಪ್ರತಿಷ್ಠಿತ ಕರ್ನಾಟಕ ಲಲಿತಕಲಾ ಅಕಾಡೆಮಿ ಪ್ರಶಸ್ತಿಯನ್ನು ಸ್ವೀಕರಿಸಿದರು. ಈ ಪ್ರಶಸ್ತಿಯು ಅವರ ಅಚಲ ಸಮರ್ಪಣೆ, ಸೃಜನಶೀಲ ದೃಷ್ಟಿಕೋನ ಮತ್ತು ಕಲಾಜಗತ್ತಿಗೆ ನೀಡಿದ ದೀರ್ಘಕಾಲೀನ ಕೊಡುಗೆಗಳಿಗೆ ಸಂದ ಗೌರವವಾಗಿದೆ. ಕಳೆದ ಹಲವಾರು ದಶಕಗಳಲ್ಲಿ, ಅವರು ಚಿತ್ರಕಲೆ, ಕ್ಯುರೇಟೋರಿಯಲ್ ಕೆಲಸ, ಕಲಾಪ್ರದರ್ಶನಗಳು ಮತ್ತು ಸಾಂಸ್ಕೃತಿಕ ಪರಂಪರೆಯ ಸಂರಕ್ಷಣೆ ಕ್ಷೇತ್ರಗಳಲ್ಲಿ ಗಮನಾರ್ಹ ಛಾಪು ಮೂಡಿಸಿದ್ದಾರೆ. 'ಬೆಳಕಿನ ಕಡೆಗೆ' ಮತ್ತು 'ಲಾಸ್ಟ್ ಸಪ್ಪರ್'ನಂತಹ ಅವರ ಅಮೂರ್ತ ಸರಣಿಗಳ ಮೂಲಕ, ಅವರು ಸಮಕಾಲೀನ ಕಲೆಯಲ್ಲಿ ವಿಶಿಷ್ಟ ವರ್ಣಚಿತ್ರಗಳನ್ನು ಮಾಡಿದ್ದಾರೆ. ಮಂಗಳೂರು ನಗರದ ಕಲಾರಾಜೇಂದ್ರ ಕೇದಿಗೆ ಅವರು 25ಕ್ಕೂ ಹೆಚ್ಚು ಕಲಾ ಪ್ರದರ್ಶನಗಳನ್ನು ನಡೆಸಿದ ಸ್ವ-ಚಿಂತನಾ ವರ್ಣಚಿತ್ರಕಾರರು.

ರಾಜೇಂದ್ರ ಕೇದಿಗೆ ಅವರು ಕರಾವಳಿ ಕರ್ನಾಟಕದ 34 ಮರೆತುಹೋದ ಕಲಾವಿದರ ಜೀವನ ಮತ್ತು ಕೃತಿಗಳನ್ನು ಬೆಳಕಿಗೆ ತರುವ 'ಮೋಡೆಪು' ಪುಸ್ತಕವನ್ನು ಸಹ-ಸಂಪಾದಕರಾಗಿ ಕೆಲಸ ಮಾಡಿದ್ದಾರೆ. ಈ ಸಾಧನೆಯು ಕೂಡಾ ಅವರಿಗೆ ಅಕಾಡೆಮಿಯಿಂದ ಪ್ರತಿಷ್ಠಿತ ಪ್ರಶಸ್ತಿಯನ್ನು ಗಳಿಸಲು ಸಹಾಯಕವಾಗಿದೆ.

ರಾಜೇಂದ್ರ ಕೇದಿಗೆ ಇವರು ಕರ್ನಾಟಕ ಲಲಿತಕಲಾ ಅಕಾಡೆಮಿ ಬೆಂಗಳೂರು ಇದರ ದಕ್ಷಿಣ ಕನ್ನಡ ಜಿಲ್ಲಾ ವಲಯದ ಸಂಚಾಲಕ ಹಾಗೂ ಸದಸ್ಯರಾಗಿ ಎರಡು ಅವಧಿಗೆ ಆಯ್ಕೆಯಾಗಿ ಸಂಯೋಜಕರಾಗಿ ಸೇವೆ ಮಾಡಿದ್ದಾರೆ. ನೂರಾರು ಯುವ ಕಲಾವಿದರಿಗೆ ಈ ಪ್ರದೇಶದಲ್ಲಿ ಕಲೆಯ ಬಗ್ಗೆ ಆಸಕ್ತಿಯನ್ನು ಕ್ರೋಢೀಕರಿಸಲು ಅವಕಾಶ ಮಾಡಿಕೊಟ್ಟಿದ್ದಾರೆ ಹಾಗೂ ಕಲಾವಿದರ ವರ್ಣಚಿತ್ರ ಪ್ರದರ್ಶನಕ್ಕೆ ಸಹಕಾರ ಮಾಡಿದ್ದಾರೆ. ಇವರು ಇಂಟಾಚ್ ಮಂಗಳೂರು ಅಧ್ಯಾಯ ಆರ್ಟ್ ಕೆನರಾ ಟ್ರಸ್ಟ್ ಹಾಗೂ ಆರ್ಟಿಸ್ಟ್ ಫೋರಂ ಇದರ ಸಕ್ರಿಯ ಸದಸ್ಯರು. ಇವರು ಎಸ್-ಕ್ಯೂಬ್ ಆರ್ಟ್ ಗ್ಯಾಲರಿ ಎಂಬ ಸಂಸ್ಥೆಯನ್ನು ಮಂಗಳೂರಿನಲ್ಲಿ ನಡೆಸಿಕೊಂಡು ಬಂದಿರುತ್ತಾರೆ ಜೊತೆಗೆ ಸಂಘ-ಸಂಸ್ಥೆಗಳ ಸಹಭಾಗಿತ್ವದ ಮೂಲಕ ಹಲವಾರು ಕಲಾಚಟುವಟಿಕೆಗಳನ್ನು ನಡೆಸಿರುತ್ತಾರೆ, ಕೆಲಸ ಮಾಡಿರುತ್ತಾರೆ.

ಆರ್ಟ್ ಕೆನರಾ ಟ್ರಸ್ಟ್ ಮತ್ತು ಎಸ್-ಕ್ಯೂಬ್ ಆರ್ಟ್ ಗ್ಯಾಲರಿಯಂತಹ ಉಪಕ್ರಮಗಳ ಮೂಲಕ ಅವರು ಉದಯೋನ್ಮುಖ ಕಲಾವಿದರಿಗೆ ವೇದಿಕೆಗಳನ್ನು ಸೃಷ್ಟಿಸಿದ್ದಾರೆ. ಮಂಗಳೂರಿನಲ್ಲಿ 'ಚಿತ್ರ ಚಾವಡಿ' ಮತ್ತು 'ಚಿತ್ರ ಸಂತೆ'ಯಂತಹ ಕಾರ್ಯಕ್ರಮಗಳನ್ನು ಆಯೋಜಿಸುವಲ್ಲಿ ಅವರ ಪ್ರಯತ್ನಗಳು ಕಲೆಯನ್ನು ಜನಸಾಮಾನ್ಯರಿಗೆ ತಲುಪಿಸುವಲ್ಲಿ ಪ್ರಮುಖ ಪಾತ್ರವಹಿಸಿವೆ. ಅವರು ಕೇವಲ ಕಲಾವಿದರಲ್ಲ, ಚಿಂತಕರು, ಮಾರ್ಗದರ್ಶಕರು ಮತ್ತು ಕಲೆ ಮತ್ತು ಸಂಸ್ಕೃತಿಯ ನಿಜವಾದ ರಾಯಭಾರಿ ಕೂಡ.

ಇವರ ಹುಟ್ಟೂರು ಬಂಟ್ವಾಳ ತಾಲೂಕಿನ ದೇವಸ್ಯಪಡೂರು ಗ್ರಾಮವಾಗಿದ್ದು, ತಂದೆ-ತಾಯಿಯವರಾದ ಕೇದಿಗೆ ಶ್ರೀ ಭಾಸ್ಕರ್ ರಾವ್ ಮತ್ತು ಶ್ರೀಮತಿ ಲಕ್ಷ್ಮೀ ಬಿ. ರಾವ್ ದಂಪತಿಗಳು ಕೃಷಿಕರಾಗಿದ್ದುಕೊಂಡು ಸಾಹಿತ್ಯ, ಸಂಗೀತ, ನಾಟಕ ಮತ್ತು ಚಿತ್ರಕಲೆಯಲ್ಲಿ ಅಭಿರುಚಿ ಇದ್ದು ಆ ನಿಟ್ಟಿನಲ್ಲಿ ಕೆಲಸ ಮಾಡಿದವರಾಗಿರುತ್ತಾರೆ.

ಶ್ರೀ ರಾಜೇಂದ್ರ ಕೇದಿಗೆಯವರು ಒಬ್ಬ ವೃತ್ತಿಪರ ಕಲಾವಿದರು ಹಾಗೆಯೇ ಕವಿಯಾಗಿಯೂ ಗುರುತಿಸಿಕೊಂಡು ಹೆಚ್ಚಾಗಿ ಕನ್ನಡ ಹಾಗೂ ತುಳುವಿನಲ್ಲಿ ಬರೆಯುತ್ತಿದ್ದು, ಇವರ ಮಾತೃಭಾಷೆಯು ತುಳು ಆಗಿದೆ. ತುಳು ಸಾಹಿತ್ಯ ಅಕಾಡೆಮಿ ವಿಶ್ವ ತುಳು ಸಾಹಿತ್ಯ ಸಮ್ಮೇಳನದ ಕವಿಗೋಷ್ಠಿ ಹೀಗೆ ಹಲವೆಡೆ ಭಾಗವಹಿಸುತ್ತಿದ್ದರು. ಕಾಂಚನಗಂಗಾ ಪ್ರತಿಷ್ಠಾನ ಬಹರೈನ್ ಎಂಬ ಸಂಸ್ಥೆಯು ಹಮ್ಮಿಕೊಂಡ ಜಾಗತಿಕ ಮಟ್ಟದ ತುಳು ಕಾವ್ಯ ಸ್ಪರ್ಧೆಯಲ್ಲಿ 'ಕರಿಯಿನ ನೆಂಪುಲು' ಎಂಬ ಕವಿತೆಯು 'ಕಾವ್ಯಶ್ರೀ ಪ್ರಶಸ್ತಿ'ಯನ್ನು ಪಡೆದಿರುತ್ತದೆ. ಅಲ್ಲದೆ ಜಿಲ್ಲಾ ಸಾಹಿತ್ಯ ಪರಿಷತ್ತು ನಡೆಸಿದ 19ನೇ ಸಾಹಿತ್ಯ ಸಮ್ಮೇಳನ ಪೊಳಲಿ 2014 ಇದರ ಕವನ ಸ್ಪರ್ಧೆಯ ಸಾರ್ವಜನಿಕ ವಿಭಾಗದಲ್ಲಿ ದ್ವಿತೀಯ ಸ್ಥಾನವು ಬಂದಿರುತ್ತದೆ. ಕಲಾಬದುಕಿನಲ್ಲಿ ಶ್ರೀಯುತರ ಕಲಾಕೃತಿಗಳು ವಿಷಯಾಧಾರಿತವಾಗಿದ್ದು, ವಿವಿಧ ಮಾಧ್ಯಮಗಳ ಮೂಲಕ ಪ್ರಯೋಗಾತ್ಮಕವಾಗಿರುತ್ತದೆ. ಚಿತ್ರಕಲಾವಿದರಾಗಿ ರಾಜ್ಯ, ರಾಷ್ಟ್ರ, ಅಂತಾರಾಷ್ಟ್ರೀಯ ಮಟ್ಟದ ಕಲಾಚಟುವಟಿಕೆಗಳಲ್ಲಿ ಭಾಗವಹಿಸಿರುತ್ತಾರೆ. ಕಲಾಕ್ಷೇತ್ರದಲ್ಲಿ ನಿಮ್ಮ ವಿಶಿಷ್ಟ ಕೊಡುಗೆಗಳು ಕೇವಲ ನಿಮ್ಮ ವೈಯಕ್ತಿಕ ಸಾಧನೆಗೆ ಮಾತ್ರವಲ್ಲ, ನಮ್ಮ ಭಾಗದ ಗೌರವವನ್ನೂ ಹೆಚ್ಚಿಸಿವೆ. ನಿಮ್ಮ ಈ ಕಲಾಸಾಧನೆ ನನಗೆ ವೈಯಕ್ತಿಕವಾಗಿ ಹೆಮ್ಮೆಯ ವಿಷಯವಾಗಿದೆ. ಭವಿಷ್ಯದಲ್ಲಿಯೂ ನೀವು ಇನ್ನೂ ಹೆಚ್ಚಿನ ಸಾಧನೆಯ ಹೆಜ್ಜೆಯ ಗುರುತು ಸದ್ದು ಮಾಡಲಿ, ತಮ್ಮ ಸೃಜನಶೀಲತಯೇ ಮುಂದಿನ ಸಾಧನೆಗಳಿಗೆ ಸೋಪಾನವಾಗಲಿ.

ಈ ಅರ್ಹಗೌರವಕ್ಕಾಗಿ ಅವರಿಗೆ ಹೃತ್ಪೂರ್ವಕ ಅಭಿನಂದನೆಗಳನ್ನು ಸಲ್ಲಿಸುತ್ತೇವೆ ಮತ್ತು ತಮ್ಮ ಮುಂದಿನ ಎಲ್ಲಾ ಪ್ರಯತ್ನಗಳಲ್ಲಿ ಯಶಸ್ಸು ಮುಂದುವರಿಯಲಿ. ಇನ್ನೂ ಅನೇಕ ಪ್ರಶಸ್ತಿಗಳನ್ನು ನಿಮ್ಮನ್ನು ಅರಸಿಬರಲಿ ಎಂದು ಹಾರೈಸುತ್ತೇವೆ.

– ***ವಸಂತ ಕೇದಿಗೆ***

Celebrating 60th Year 1963-2023
RAJESH POWER PRESS
PRINTERS & PUBLISHERS
DARBE - 574 202, PUTTUR, D. K., KARNATAKA
Phone : (08251) 231696, 231697 & 9448481696
E-mail : msraghunathrao@hotmail.com

Phone : 0824 - 2440110, 2213946
VISHRAM MOTORS (P.) LTD.
No. 4, Kodialbail Church Building
K. S. Rao Road, MANGALORE - 575 003
Authorised Dealers for :
Vijai Super GP 150 &
Vikram 3 Wheelers (Petrol & Diesel)

NAVADURGA FINANCIALS
Estd 1998
SCAN ME TO KNOW MORE!!!


Sri Hari Adyapady
Proprietor
Ph : 0824-2251597 (R)
2252119 (O)
Mobile : 9448344612
9964072489
SHIVA ELECTRICALS
2nd Floor, Ozanam Complex, Church Building
Main Road, BAJPE, MANGALORE
We undertake all types of Electrical, Plumbing and Sanitary works

# ಸೇವೆಯ ಹಾದಿಯಲ್ಲಿ ಬೆಳಗುತ್ತಿರುವ ಯುವಶಕ್ತಿ ವಿದುಷಿ ಡಾಕ್ಟರ್ ಗಾನ ಪಿಲಿಂಜಾ

ವಿದುಷಿ ಡಾ। ಗಾನ ಪಿಲಿಂಜ (ಪಿ.ಟಿ.) ಪುತ್ತೂರಿನ ನೆಹರುನಗರದ ನಿವಾಸಿ ಶ್ರೀ ಮೋಹನ್‌ದಾಸ್ ಪಿಲಿಂಜ ಮತ್ತು ಶ್ರೀಮತಿ ಗಾಯತ್ರಿ ಪಿಲಿಂಜ ಇವರ ಪುತ್ರಿ. ಇವರು ನಿಟ್ಟೆ ಇನ್‌ಸ್ಟಿಟ್ಯೂಟ್ ಆಫ್ ಫಿಸಿಯೋಥೆರಪಿ ಕಾಲೇಜಿನಲ್ಲಿ ತಮ್ಮ Bachelors of Physiotherapy ಪದವಿಯನ್ನು ಯಶಸ್ವಿಯಾಗಿ ಪೂರ್ಣಗೊಳಿಸಿ, ಈಗ ಅಲ್ಲಿಯೇ Masters of Physiotherapy ಮಸ್ಕುಲೋಸ್ಕೆಲೆಟಲ್ ಮತ್ತು ಸ್ಪೋರ್ಟ್ಸ್ ಇಂಜುರಿ (ಆರ್ಥೋಪೆಡಿಕ್ಸ್) ವಿಭಾಗದಲ್ಲಿ ಸ್ನಾತಕೋತ್ತರ ಪದವಿಯನ್ನು ಅಧ್ಯಯನ ಮಾಡುತ್ತಿದ್ದಾರೆ. ಇವರು ತಮ್ಮ ಗುರುಗಳಾದ ವಿದುಷಿ ಡಾ. ಶ್ರುತಿ ರೋಶನ್ ಬೆಳ್ಳೂರು (ಭಾರತೀಯ ನೃತ್ಯಕಲಾ ಶಾಲೆ, ಪುತ್ತೂರು) ಇವರ ಮಾರ್ಗದರ್ಶನದಲ್ಲಿ ಕರ್ನಾಟಕ ಶಿಕ್ಷಣ ಪ್ರೌಢ ಶಾಲೆಯಿಂದ ನಡೆಸಿದ ಜೂನಿಯರ್ ಗ್ರೇಡ್, ಸೀನಿಯರ್ ಗ್ರೇಡ್ ಮತ್ತು ವಿದ್ವತ್ ಪೂರ್ವದೊಂದಿಗೆ ಕರ್ನಾಟಕ ರಾಜ್ಯ ಡಾ. ಗಂಗೂಬಾಯಿ ಹಾನಗಲ್ ಸಂಗೀತ ಮತ್ತು ಪ್ರದರ್ಶನ ಕಲೆಗಳ ವಿಶ್ವವಿದ್ಯಾಲಯದ ಮೈಸೂರು ಇದರ ಅಧೀನದಲ್ಲಿ ನಡೆಸಿದ ವಿದ್ವತ್ ಅಂತಿಮ ಪರೀಕ್ಷೆಯನ್ನು ಯಶಸ್ವಿಯಾಗಿ ಪೂರ್ಣಗೊಳಿಸಿದ್ದಾರೆ.

ಕರ್ನಾಟಕ ಶಾಸ್ತ್ರೀಯ ಸಂಗೀತವನ್ನು ವಿದುಷಿ ವೀಣಾ ರಾಘವೇಂದ್ರ (ಗಾನ ಸರಸ್ವತಿ ಕಲೆ ಶಾಲೆ) ಅವರ ಮಾರ್ಗದರ್ಶನದಲ್ಲಿ ಕರ್ನಾಟಕ ಶಿಕ್ಷಣ ಪ್ರೌಢಶಾಲೆಯಿಂದ ನಡೆಸಿದ ಜೂನಿಯರ್ ಮತ್ತು ಸೀನಿಯರ್ ಗ್ರೇಡ್ ಪರೀಕ್ಷೆಗಳನ್ನು ಪೂರ್ಣಗೊಳಿಸಿ, ಪ್ರಸ್ತುತ ಸಂಗೀತ ವಿದ್ವತ್‌ಪೂರ್ವದ ತಯಾರಿಯನ್ನು ಮಾಡುತ್ತಿದ್ದಾರೆ. ಇವರು ವೀಣಾವಾದನವನ್ನು ವಿದುಷಿ ಮೀನಾಕ್ಷಿ ಅವರ ಬಳಿ ಕಲಿಯುತ್ತಿದ್ದು, ಇವರು ತಮ್ಮದೇ ಆದ ಕರ್ನಾಟಕ ಶಾಸ್ತ್ರೀಯ ಸಂಗೀತ ತರಗತಿಗಳನ್ನು ವಿದುಷಿ ಡಾ. ಶ್ರುತಿ ರೋಶನ್ ಬೆಳ್ಳೂರು ಅವರ ಪುತ್ತೂರಿನ ಭಾರತೀಯ ನೃತ್ಯ ಕಲಾಶಾಲೆಯಲ್ಲಿ ಹಾಗೂ ವಿದುಷಿ ರೋಹಿಣಿ ಉದಯಕುಮಾರ್ ಅವರ ಬಿ.ಸಿ. ರೋಡ್‌ನಲ್ಲಿರುವ 'ಶ್ರೀದೇವಿ ನೃತ್ಯಾರಾಧನಾ ಕಲಾಕೇಂದ್ರ'ದಲ್ಲಿ ನಡೆಸುತ್ತಿದ್ದು, ಎರಡೂ ಸಂಸ್ಥೆಗಳ ಭರತನಾಟ್ಯ ವಾರ್ಷಿಕೋತ್ಸವ ಕಾರ್ಯಕ್ರಮಗಳಲ್ಲಿ ಹಿನ್ನಲೆ ಗಾಯನದಲ್ಲಿ ಸಹಕರಿಸುತ್ತಿದ್ದಾರೆ. ಪ್ರತಿ ವರ್ಷ ನಡೆಯುವ ಜೂನಿಯರ್, ಸೀನಿಯರ್ ಮತ್ತು ವಿದ್ವತ್ ಪರೀಕ್ಷೆಗಳಿಗೆ ಹಿನ್ನಲೆ ಗಾಯನದಲ್ಲಿ ಸಹಕರಿಸುತ್ತಿದ್ದಾರೆ. ಆನ್‌ಲೈನ್ ಮತ್ತು ಆಫ್‌ಲೈನ್ (ಮನೆಯಲ್ಲಿ) ಮಾಧ್ಯಮದಲ್ಲಿ ಸಂಗೀತ ಭರತನಾಟ್ಯ ತರಗತಿಗಳನ್ನು ನಡೆಸಿಕೊಡುತ್ತಿದ್ದಾರೆ.

ಇವರಿಗೆ ಪುತ್ತೂರು ಶ್ರೀ ಮಹಾಲಿಂಗೇಶ್ವರ ದೇವಸ್ಥಾನದ ನಟರಾಜ ವೇದಿಕೆಯಲ್ಲಿ, ಭಾರತೀಯ ನೃತ್ಯಕಲಾ ಶಾಲೆಯ, ಭರತನಾಟ್ಯ ವಾರ್ಷಿಕೋತ್ಸವದ ಸಲುವಾಗಿ ಕರ್ನಾಟಕ ರಾಜ್ಯ ಡಾ. ಗಂಗೂಬಾಯಿ ಹಾನಗಲ್ ಸಂಗೀತ ಮತ್ತು ಪ್ರದರ್ಶನ ಕಲೆಗಳ ವಿಶ್ವವಿದ್ಯಾಲಯದ ಮೈಸೂರು ಇದರ ಅಧೀನದಲ್ಲಿ ನಡೆಸಿದ ವಿದ್ವತ್ ಅಂತಿಮ ಪರೀಕ್ಷೆಯನ್ನು ಯಶಸ್ವಿಯಾಗಿ ಪೂರ್ಣಗೊಳಿಸಿದ ಸಲುವಾಗಿ ಸನ್ಮಾನಿಸಲಾಯಿತು. ಶ್ರೀಕೃಷ್ಣ ಯುವಕ ಮಂಡಲ (ರಿಜಿಸ್ಟರ್ಡ್), ನೆಹರೂನಗರ, ಪುತ್ತೂರು ವತಿಯಿಂದ




'ಕಲಾಮಾಣಿಕ್ಯ' ಪ್ರಶಸ್ತಿ ನೀಡಿ ಗೌರವಿಸಲಾಯಿತು. ಹೊಸಬೆಳಕು ಬಡವರ ಆಶಾಕಿರಣ (ಆರ್ಲಪದವು – ರಿಜಿಸ್ಟರ್ಡ್, ಪುತ್ತೂರು), ರಕ್ತ ಸಂಜೀವಿನಿ ಬ್ಲಡ್ ಗ್ರೂಪ್ (ಪುತ್ತೂರು) ಹಾಗೂ ಶ್ರೀಕೃಷ್ಣ ಯುವಕ ಮಂಡಳ (ರಿಜಿಸ್ಟರ್ಡ್, ಪುತ್ತೂರು) ಇವರಿಂದ ತಮ್ಮ ಮನೆಯಲ್ಲಿ ಸನ್ಮಾನಿಸಲಾಯಿತು. ರೋಟರಿ ಕ್ಲಬ್ ಪುತ್ತೂರು ಯುವದಿಂದ 'ರೋಟರಿ ಯುವ ಸಮಾಜ ಸೇವಾ ರತ್ನ' ಪ್ರಶಸ್ತಿ ನೀಡಿ ಗೌರವಿಸಲಾಯಿತು.

ಇವರು ಕಳೆದ ಮೂರು ವರ್ಷಗಳಿಂದ ಮುರದ ಶಿವಸದನ ಹಿರಿಯ ನಾಗರಿಕರ ಹಾಗೂ ವಿಶೇಷಚೇತನರ ವಸತಿನಿಲಯಕ್ಕೆ ಭೇಟಿ ನೀಡಿ ಆಟದ ರೂಪದಲ್ಲಿ ವ್ಯಾಯಾಮ ಮಾಡುವ ಕಲೆ, ಹಾಡು, ಆಟ ಹಾಗೂ ಅವರ ಯೋಗಕ್ಷೇಮವನ್ನು ವಿಚಾರಿಸುತ್ತ ಅವರೊಂದಿಗೆ ಅಮೂಲ್ಯ ಕ್ಷಣಗಳನ್ನು ತನ್ನ ವಿದ್ಯಾಭ್ಯಾಸದೊಂದಿಗೆ ಸಹಕರಿಸುತ್ತಿದ್ದಾರೆ. ಹಾಗೆಯೇ ವಿಶೇಷ ಚೇತನ ಮಕ್ಕಳೊಂದಿಗೆ ಅವರ ಸಹಕಾರದಿಂದ ವ್ಯಾಯಾಮ ಮಾಡಿಸಿ ಅವರಲ್ಲಿ ಆತ್ಮವಿಶ್ವಾಸ ಹಾಗೂ ಸಂತೋಷ ಹುಟ್ಟಿಸುತ್ತಿದ್ದಾರೆ.

ಈಕೆಯ ಸಮಾಜಮುಖೀ ಸೇವಾ ಕಾರ್ಯಕ್ರಮಗಳು ಹಲವಾರು ಸಂಘ–ಸಂಸ್ಥೆಗಳ ಗಮನಗಳನ್ನು ಸೆಳೆದು ಅನೇಕ ಸನ್ಮಾನ ಬಿರುದುಗಳು ಲಭಿಸಿರುತ್ತದೆ. ಎಲ್ಲರಿಗೂ ಮಾದರಿಯಾಗಿರುವ ಈಕೆ ತನ್ನ ಜೀವನವೇ ಜ್ಞಾನ, ಕಲೆ, ಸೇವೆ ಮತ್ತು ಸಹಾನುಭೂತಿಯಿಂದ ಹೆತ್ತವರಿಗೆ, ಶಿವಸದನಕ್ಕೆ, ಸಮಾಜಕ್ಕೆ ಆಶಾಕಿರಣವಾಗಿರುವಳು. ಅವಳ ಭವಿಷ್ಯ ಇನ್ನಷ್ಟು ಬೆಳಗಿ ಉತ್ತುಂಗಕ್ಕೇರಲಿ ಎಂದು ಸುಬ್ರಹ್ಮಣ್ಯ ಸಭೆಯು ಹಾರೈಸುತ್ತದೆ.

***– ಶ್ರೀಮತಿ ಸುಮಂಗಲಾ ಪ್ರಭಾಕರ್***




ಮೂಡಬಿದ್ರೆ ತಾಲೂಕು ಪುತ್ತಿಗೆ ಗ್ರಾಮದ ಶ್ರೀ ಸದಾಶಿವ ರಾವ್ ಬೊಕ್ಕಸ ಮತ್ತು ಶ್ರೀಮತಿ ಪ್ರೀತಿ ಇವರ ಸುಪುತ್ರಿ **ಚಿ। ಸೌ। ದೀಪ್ತಿ** ಹಾಗೂ ಪುತ್ತೂರು ತಾಲೂಕು ಉಪ್ಪಿನಂಗಡಿ ಗ್ರಾಮದ ಪಾದಾಳದಲ್ಲಿರುವ ಶ್ರೀ ಶುಭಕರ ಮತ್ತು ಶ್ರೀಮತಿ ಉಷಾರಾಣಿ ಇವರ ಸುಪುತ್ರ **ಚಿ। ಧನುಷ್** ಇವರ ವಿವಾಹವು 'ಶ್ರೀ ಪಾಂಚಜನ್ಯ ಸಭಾಭವನ', ಬನ್ನಡ್ಕ, ಮೂಡಬಿದ್ರೆಯಲ್ಲಿ ತಾ. 13–07–2025ನೇ ರವಿವಾರದಂದು ನೆರವೇರಿತು.










ಪತ್ರಿಕೆಗೆ ಶುಭ ಬಯಸುವ–

**ಶ್ರೀ ಕಾಂತಾವರ ಜಯಪ್ರಕಾಶ್
ಮತ್ತು ಶ್ರೀಲತಾ ಹಾಗೂ
ತನ್ವಿ, ನಿವೇದ, ದೃತಿ ಮತ್ತು ದ್ರುವ್**

ಪತ್ರಿಕೆಗೆ ಶುಭ ಬಯಸುವ–

**ಶ್ರೀಮತಿ ಕುಸುಮಾ ನವೀನ್ ಕುಮಾರ್ ಮಂಗಳೂರು
ಶ್ರೀಮತಿ ರೇಷ್ಮ ವಸಂತ ಕುಮಾರ್, ಶ್ರೀ ಅನೀಶ್ ರಾವ್ ಉಡುಪಿ
ಶ್ರೀಮತಿ ಸುಷ್ಮ ಶಿವಾನಂದ ರಾವ್, ಶ್ರೀ ಅಂಜನ್ ರಾವ್ ದುಬೈ**

# ಶ್ರೀ ಸುಬ್ರಹ್ಮಣ್ಯ ಸಭಾ, ಮಂಗಳೂರು ಪ್ರಾಯೋಜಿತ ಪ್ರತಿಷ್ಠಿತ ಯೋಜನೆ ಪುತ್ತೂರಿನ 'ಶಿವಸದನ'ಕ್ಕೆ ಸಹಾಯಹಸ್ತ



ಮಂಗಳೂರಿನ ಕುಲಶೇಖರ ನಿವಾಸಿ ಕೀರ್ತಿಶೇಷ ಯಚ್. ಶಿವರಾವ್ ಪತ್ನಿ ಕೀರ್ತಿಶೇಷ ಯಚ್. ಮನೋರಮ ರಾವ್ ಇವರ ಎರಡನೆಯ ಪುತ್ರ ಕೀರ್ತಿಶೇಷ ಯಚ್. ರಮೇಶ್ ಕುಮಾರ್ ಇವರ ಸ್ಮರಣಾರ್ಥ ಪ್ರಥಮ ಪುತ್ರ ಬೆಂಗಳೂರು ನಿವಾಸಿ ಶ್ರೀ ಯಚ್. ಸತೀಶ್ ಕುಮಾರ್, ಸೊಸೆ ಶ್ರೀಮತಿ ಎಚ್. ಪೂರ್ಣಿಮಾ ಎಸ್. ಕುಮಾರ್, ಮೊಮ್ಮಗ ಶ್ರೀ ಪವನ್ ಕುಮಾರ್, ಶ್ರೀಮತಿ ಅಕ್ಷತಾ ಪವನ್ ಕುಮಾರ್, ಮರಿಮೊಮ್ಮಗ ಸ್ಕಂದ ಕುಮಾರ್, ಎರಡನೆಯ ಸೊಸೆ ಶ್ರೀಮತಿ ಸುಕನ್ಯಾ ರಮೇಶ್ ಇವರು ಶ್ರೀ ಸುಬ್ರಹ್ಮಣ್ಯ ಸಭಾ ಆಡಳಿತದ ಪುತ್ತೂರಿನ 'ಶಿವಸದನ'ಕ್ಕೆ ₹ **1,00,000/-** (ರೂಪ್ಯಾ ಒಂದು ಲಕ್ಷ) ದೇಣಿಗೆ ನೀಡಿದ್ದಾರೆ. ಮುಂದೆ ಇನ್ನೂ ಹೆಚ್ಚಿನ ದೇಣಿಗೆ ನೀಡುವ ಭರವಸೆ ನೀಡಿದ್ದಾರೆ. ಅವರಿಗೆ ಶ್ರೀ ಸುಬ್ರಹ್ಮಣ್ಯ ಸಭಾದ ಪರವಾಗಿ ಹಾರ್ದಿಕ ವಂದನೆಗಳು.






Please log on to : www.subramanyasabha.com For all information on Subramanya Sabha and Address of Sthanika in Mangalore, Bantwal & Moodabidri

*Publisher :* Dr. A. P. Krishna, President, Shree Subrahmanya Sabha (R.), Kudpi Padmanabhayya Gardens, Kodialbail, Mangalore - 3

*Editor :* Sri M. S. Raghunath Rao, Darbe, Puttur *Printed at :* Rajesh Power Press, Darbe - 574 202, Puttur, D. K.